CC-O. In Public Domain. Digitized by eGangotri

ಶ್ರೀ ಸಚ್ಚಿದಾನಂದ ಭಾರತೀ

(ಜೀವನ ಚಿತ್ರ)

ಪು. ಲಕ್ಷ್ಮೀನರಸಿಂಹ ಶಾಸ್ತ್ರೀ

*

ವಿದ್ಯಾಶಂಕರ ಪ್ರಕಾಶನ

ಮೈಸೂರು - ೪

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಸಚ್ಚಿದಾನಂದ ಭಾರತೀ

(ಜೀವನ ಚಿತ್ರ)

ಲ. ನ. ಶಾಸ್ತ್ರೀ

ವಿದ್ಯಾಶಂಕರ ಪ್ರಕಾಶನ
ಮೈಸೂರು-೪
Sri Vidyabharathi Book Centre, Sringeri

CC-0. In Public Domain. Digitized by eGangotri

Shri Sadhu Vaibhava Biography in Kannada written by Shri L. N. Sastry, Published by Smt. Lakshminarasu, Vidyasankara Prakashana, Mysore-4.

Copy Right
Smt. Lakshmi Narasu.

Printers :
M/s MAYURA ENTERPRISES
Ramavilas Road,
Mysore-1

First Edition 1970

Price Re 1-00

For Copies Please Write to
VIDYASANKARA PRAKASHANA
No 30, Devirammanni Agrahar
Mysore-4

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಕಾಶಕರ ಅರಿಕೆ

ಶೃಂಗೇರಿಯ ಶಾರದಾಪೀಠಕ್ಕೆ ಕೆಳದಿಯ ನಾಯಕರು ಸಲ್ಲಿಸಿದ ಅಮೂಲ್ಯವಾದ ಸೇವೆಯನ್ನು ಕುರಿತು ಈ ಲೇಖಕರು ಬರೆಯಬೇಕೆಂದು ಉದ್ದೇಶಿಸಿರುವ ಪುಸ್ತಕದ ಒಂದು ಅಧ್ಯಾಯಿಕೆ ಈ ಪುಟ್ಟ ಹೊತ್ತಿಗೆ.

ಶೃಂಗೇರಿ ಜಗದ್ಗುರು ಶ್ರೀ ಶ್ರೀ ಅಭಿನವವಿದ್ಯಾತೀರ್ಥ ಮಹಾಸ್ವಾಮಿಗಳವರ ಆಶೀರ್ವಾದದಿಂದ ಈ ಕೃತಿಯು ಪ್ರಕಟವಾಗುತ್ತಿದೆ. ಶ್ರೀಗುರು ಚರಣಗಳಲ್ಲಿ ನಮ್ಮ ಅನಂತ ಪ್ರಣಾಮಗಳನ್ನು ಅರ್ಪಿಸುತ್ತೇವೆ.

ನಮ್ಮ ಹಿಂದಿನ ಎಲ್ಲ ಪ್ರಕಟನೆಗಳಿಗೆ ದೊರೆತಂತೆಯೇ ಸಹೃದಯ ವೃಂದದ ಪ್ರೋತ್ಸಾಹ ಸಹಕಾರಗಳು ಈ ಕೃತಿಗೂ ದೊರೆಯುತ್ತವೆಂದು ನಂಬಿದ್ದೇವೆ.

ಸಾಧಾರಣ ಸಂವತ್ಸರ
ಶ್ರಾವಣ ಪೂರ್ಣಿಮಾ
೧೭—೮—೧೯೭೦

ಪ್ರಕಾಶಕರು

Sri Vidyabharathi Book Centre, Sringeri

CC-O. In Public Domain. Digitized by eGangotri

ಲೇಖಕನ ಬಿನ್ನಹ

ಈ ಕೃತಿರಚನೆ ಮಾಡಬೇಕೆಂಬ ನನ್ನ ಅಭಿಲಾಷೆಯನ್ನು ತಿಳಿಸಿದಾಗ, ನನ್ನನ್ನು ಹರಸಿ ಆಶೀರ್ವದಿಸಿದವರು ಶೃಂಗೇರೀ ಜಗದ್ಗುರು ಮಹಾಸ್ವಾಮಿಗಳವರು. ಶ್ರೀ ಶ್ರೀಗಳವರ ಪ್ರೋತ್ಸಾಹದಿಂದಲೇ ಈ ಕೃತಿ ರಚಿತವಾಗಿ, ಪ್ರಕಟವಾಗುತ್ತಿದೆ. ಶ್ರೀ ಶ್ರೀಗಳವರ ಚರಣಗಳಲ್ಲಿ ನನ್ನ ಸಾಷ್ಟಾಂಗ ನಮಸ್ಕಾರಗಳನ್ನು ಅರ್ಪಿಸುತ್ತೇನೆ.

ಈ ಕೃತಿ ರಚನೆಗೆ ಮೈಸೂರು ಗೆಜಿಟಿಯರ್, ಎಪಿಗ್ರಾಫಿಕಾ ಕರ್ನಾಟಿಕಾ ಸಂಪುಟಗಳು, ಮೈಸೂರು ಶಾಸನದ ಇಲಾಖಾ ವರದಿಗಳಿಂದ ಸಾಮಗ್ರಿಯನ್ನು ಸಂಗ್ರಹಿಸಿದ್ದೇನೆ. ಹಾಗೆಯೇ ಶ್ರೀ ಲಿಂಗಣ್ಣ ಕವಿಯ ಕೆಳದಿ ನೃಪವಿಜಯಕಾವ್ಯ ಶ್ರೀ ಜ್ಞಾನಾನಂದ ಭಾರತೀಯವರ ಶ್ರೀ ಸಚ್ಚಿದಾನಂದ ಭಾರತೀ, ಶ್ರೀ ಕೆ. ಆರ್. ವೆಂಕಟರಾಮನ್ನರ ದಿ ಥ್ರೊನ್ ಆಫ್ ಟ್ರಾನ್ಸ್‌ಸೆಂಡೆಂಟಲ್ ವಿಸ್‌ಡಮ್ ಮತ್ತು ಶ್ರೀ ಕೆ. ಡಿ. ಸ್ವಾಮಿನಾಥನ್‌ರವರ ನಾಯಕಾಸ್ ಆಫ್ ಇಕ್ಕೇರಿ ಇವುಗಳ ಉಪಯೋಗವನ್ನೂ ಪಡೆದಿದ್ದೇನೆ. ಈ ಗ್ರಂಥಗಳ ನೆರವನ್ನು ಪಡೆದುಕೊಳ್ಳಲು ಸಹಾಯ ನೀಡಿದ ಮಹನೀಯರಿಗೆ ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ನನ್ನ ಈ ಉದ್ಯಮದಲ್ಲಿ ನನ್ನ ನೆರವಿಗೆ ಸದಾ ಸಿದ್ಧರಾಗಿರುವ ಮಿತ್ರ ಎಸ್. ಎ. ಶ್ಯಾಮರಾವ್, ಸುಂದರವಾಗಿ ಅಚ್ಚುಮಾಡಿಕೊಟ್ಟ ಮಿತ್ರರಾದ ಪ. ಮಲ್ಲೇಶ್, ಮಯೂರ ಮುದ್ರಣಾಲಯದ ನಾಕರವರ್ಗದವರಿಗೂ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

ಸಾಧಾರಣ ಸಂವತ್ಸರ
ಶ್ರಾವಣ ಪೂರ್ಣಿಮಾ
೧೬—೮—೧೯೭೦.

ಹುರಗಲವಾಡಿ ಲಕ್ಷ್ಮೀ ನರಸಿಂಹಶಾಸ್ತ್ರೀ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಸಚ್ಚಿದಾನಂದ ಭಾರತೀ

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಸಚ್ಚಿದಾನಂದ ಭಾರತೀ

ಶ್ರೀ ಶಂಕರ ಭಗವತ್ಪಾದರು ಸ್ಥಾಪಿಸಿದ ಶೃಂಗೇರೀ ಪೀಠದ ಇತಿಹಾಸವು ಹದಿನಾಲ್ಕನೆಯ ಶತಮಾನದಿಂದೀಚೆಗೆ, ಹಲವು ರಾಜ್ಯಗಳ ಮತ್ತು ರಾಜ ಮನೆತನಗಳ ಇತಿಹಾಸದೊಂದಿಗೆ, ಅವುಗಳ ಏರಿಳಿತಗಳೊಂದಿಗೆ ಹಾಸು ಹೊಕ್ಕಾಗಿದೆ. ೧೪-೧೫-೧೬ನೆಯ ಶತಮಾನಗಳಲ್ಲಿ ವಿಜಯನಗರ ಸಾಮ್ರಾಜ್ಯದ ಇತಿಹಾಸದಲ್ಲಿಯೂ, ಅನಂತರ ೧೬-೧೭-೧೮ನೆಯ ಶತಮಾನಗಳಲ್ಲಿ ಕೆಳದಿಯ ಚರಿತ್ರೆಯಲ್ಲಿಯೂ, ಆ ಬಳಿಕ ೧೫೬೫ನೆಯ ಶತಮಾನದ ಆರಂಭದವರೆಗೂ, ಮೈಸೂರಿನ ಚರಿತ್ರೆಯಲ್ಲಿಯೂ ಶೃಂಗೇರೀ ಪೀಠದ ಇತಿಹಾಸದ ಹಲವಾರು ಘಟ್ಟಗಳನ್ನು ಕಾಣಬಹುದು. ಈ ಧಾರ್ಮಿಕ ಪೀಠದ ಅಭ್ಯುದಯಕ್ಕಾಗಿ, ಆಯಾ ರಾಜಮನೆತನಗಳು ಸಲ್ಲಿಸಿದ ಸೇವೆ, ಅವರು ನಡೆಸಿಕೊಟ್ಟ ದಾನಧರ್ಮಗಳು, ಇತ್ತ ಸಹಾಯ ಸಹಕಾರ ಇದೆಲ್ಲವೂ ಪ್ರತ್ಯೇಕವೂ ದೀರ್ಘವೂ ಆದ ಅಧ್ಯಯನಕ್ಕೆ ಅರ್ಹವಾದ ವಸ್ತುಗಳಾಗಿವೆ.

ದ್ವೇಷ, ಅಸೂಯೆ, ಅನೀತಿ, ಅಂತಃಕಲಹ, ಅಪನಂಬಿಕೆ ಮುಂತಾದ ದುರ್ಗುಣಗಳೇ ವಿಜಯ ನಗರದ ಅವನತಿಗೆ ಕಾರಣವಾದುವು. ೧೫೬೫ರ ಮಹಾ ಯುದ್ಧದಲ್ಲಿ ತಾಳೀಕೋಟೆಯಲ್ಲಿ ಚಕ್ರವರ್ತಿ ಅಳಿಯ ರಾಮರಾಯನು ಹತನಾದನು. ಹಿಂದೂಗಳು ಮತ್ತೆ ಒಡೆದು ಚೂರಾದರು. ರಾಜಧಾನಿ ಹಂಪೆಯನ್ನು ಬಹಮನಿಯರೂ, ಕಾಡಿನ ಬೇಡರೂ ಹಲವಾರು ತಿಂಗಳುಗಳ ಕಾಲ ಕೊಳ್ಳೆಹೊಡೆದು, ಪಾಳುಗೆಡವಿದರು. ಅದು ಸ್ಮಶಾನ ಸದೃಶವಾಯಿತು. ರಾಜಮನೆತನಕ್ಕೆ ಸವಿುಪವಾಗಿದ್ದ ಅಳಿದುಳಿದ ಹಲವು ಜನರು ಪೆನುಗೊಂಡೆಗೆ ಓಡಿಹೋಗಿ ಅಲ್ಲಿಯೇ ತಮ್ಮ ರಾಜ್ಯವನ್ನು ಸ್ಥಾಪಿಸಿಕೊಂಡರು.

ಕೇಂದ್ರ ಸರ್ಕಾರದ ಪತನಾನಂತರ ಕರ್ನಾಟಕದಲ್ಲೆಲ್ಲಾ ಅಲ್ಲಲ್ಲಿ ದೊಂಬಿ ಗಲಭೆಗಳಾಗುತ್ತಿದ್ದವು. ಈ ಗೊಂದಲದ ಸಮಯದಲ್ಲಿ ವಿಜಯ

Sri Vidyabharathi Book Centre, Sringeri

CC-O. In Public Domain. Digitized by eGangotri

ನಗರಕ್ಕೆ ಅಧೀನರಾಗಿದ್ದ ಸಾಮಂತರು ಅನೇಕ ಜನ ಸ್ವತಂತ್ರರಾಗಿ ತಮ್ಮ ತಮ್ಮ ಸ್ವಂತ ರಾಜ್ಯಗಳನ್ನು ಸ್ಥಾಪಿಸಿಕೊಂಡರು. ತಂಜಾವೂರಿನ ನಾಯಕರೂ, ಮಧುರೆಯ ನಾಯಕರೂ, ವೆಲ್ಲೂರು, ಕೆಳದಿ, ಮೈಸೂರರಸರೂ ಹಾಗೆ ಸ್ವತಂತ್ರರಾದವರಲ್ಲಿ ಪ್ರಮುಖರು. ಕೆಳದಿ ಮುಂತಾದ ಸಣ್ಣ ಪುಟ್ಟ ರಾಜ್ಯಗಳ ದೊರೆಗಳಿಗೆ ಅಲ್ಲಿಂದ ಮುಂದೆ ಅಭ್ಯುದಯದ ಕಾಲ ಆರಂಭವಾಯಿತು.

ಶ್ರೀ ವಿದ್ಯಾರಣ್ಯರ ಯುಗಕ್ಕೆ ಮೊದಲು ಋಷ್ಯಾಶ್ರಮದಂತೆ ಇದ್ದ ಶೃಂಗೇರಿಯ ಆಮ್ನಾಯ ಪೀಠವು, ವಿಜಯನಗರದ ಚಕ್ರವರ್ತಿಗಳ ಪ್ರೋತ್ಸಾಹದಿಂದ, ಒಂದು ಧಾರ್ಮಿಕ ರಾಜ್ಯವಾಗಿ, ಸಂಸ್ಥಾನವಾಗಿ ಮಾರ್ಪಟ್ಟಿದ್ದಿತು. ಚಕ್ರವರ್ತಿಗಳೆ ಮತ್ತು ಇತರ ಪಾಳೆಯಗಾರರ ಸೇವೆ, ಸಹಕಾರಗಳಿಂದ ಮಠಕ್ಕೆ ಹೇರಳವಾದ ಆಸ್ತಿಪಾಸ್ತಿಯೂ, ಭೂಮಿ ಕಾಣಿಯೂ ಗ್ರಾಮಗಳ ದಾನವೂ ದೊರಕಿದ್ದುವು. ಅವುಗಳ ಉತ್ಪನ್ನ ದಿಂದ ದಿನೇ ದಿನೇ ವೃದ್ಧಿ ಹೊಂದುತ್ತಿದ್ದ ಮಠದ ಧಾರ್ಮಿಕ, ಸಾಂಸ್ಕೃತಿಕ ಲೌಕಿಕ ಕಾರ್ಯಗಳಿಗೆ ಹೇರಳವಾದ ಪ್ರಯೋಜನವಾಗುತ್ತಿತ್ತು. ಪೀಠದ ಆಚಾರ್ಯರಾದರೋ ಮೊದಲು ಯಾವ ಆಸ್ತಿಪಾಸ್ತಿಯೂ ಇಲ್ಲದಿದ್ದಾಗ ಹೇಗಿರುತ್ತಿದ್ದರೋ, ಅನಂತರವೂ ಹಾಗೆಯೇ ನಿರ್ಲಿಪ್ತರಾಗಿ ವಿರಾಗಿಗಳಾಗಿಯೇ ಇದ್ದು ತಪೋನುಷ್ಠಾನ ನಿರತರಾಗಿರುತ್ತಿದ್ದರು. ಮಠದ ಆಸ್ತಿಪಾಸ್ತಿಗಳು, ಇನಾಮತಿಯ ಗ್ರಾಮಗಳೂ ಹೆಚ್ಚಾದಂತೆಲ್ಲಾ ಅವುಗಳ ಆಡಳಿತ ರಕ್ಷಣೆ ಮುಂತಾದ ಲೌಕಿಕ ಕಾರ್ಯಗಳೂ ಅಗತ್ಯವಾದುವು. ಅವುಗಳ ನಿರ್ವಹಣೆಗೆ ಪುನಃ ಆಯಾ ಸೀಮೆಯ ರಾಜರ ಸಹಕಾರ ಸಹಾಯಗಳು ಅಗತ್ಯವಾಗಿದ್ದುವು. ಆ ಸಹಕಾರವೂ ಆಗಾಗ ದೊರಕುತ್ತಿದ್ದಿತು. ವಿಜಯನಗರದ ಚಕ್ರವರ್ತಿಗಳಿಂದಲೂ ಇತರ ರಾಜ ಮಹಾರಾಜರಿಂದಲೂ ಸನ್ಮಾನಿತರಾಗಿದ್ದ ಶೃಂಗೇರಿಯ ಗುರುಗಳು ರಾಜರಿಗೆ ಉಚಿತವಾದ ವೈಭವದಲ್ಲಿ ಇರುತ್ತಿದ್ದರೂ, ತಮ್ಮ ಹಿಂದಿನ ಋಷಿಗಳಂತೆ, ತಪಸ್ವಿಗಳಂತೆ, ಅವರ ಮೇಲ್ಪಂಙ್ತಿಯನ್ನೇ ಅನುಸರಿಸಿ, ಸಾತ್ವಿಕವಾದ ಸರಳವಾದ ಜೀವನ ನಡೆಸುತ್ತ ಲೋಕ ಸಂಗ್ರಹವನ್ನೂ ಮಾಡುತ್ತಿದ್ದರು.

ತಮ್ಮ ಗುರುಗಳಾದ ಶ್ರೀ ಶಂಕರ ಭಗವ

CC-O. In Public Domain. Digitized by Sri Vidyabharati Foundation, Bengaluru

CC-O. In Public Domain. Digitized by eGangotri

ತ್ಪಾದರು ಆರನೆಯ ಶತಮಾನದಲ್ಲಿ ಅವತರಿಸಿ, ಧರ್ಮಭೂಮಿಯಾದ ಭರತ ಖಂಡದ ನಾಲ್ಕು ಮೂಲೆಗಳಲ್ಲಿಯೂ ಧರ್ಮ ಪೀಠಗಳನ್ನೂ ಸ್ಥಾಪಿಸಿದ್ದುದರ ಉದ್ದೇಶ, ಭಾರತದ ಜೀವಂತ ಸಂಸ್ಕೃತಿಯ ರಕ್ಷಣೆ, ಸನಾತನವೂ ಪವಿತ್ರವೂ ಆದ ವೈದಿಕ ಧರ್ಮದ ಪೋಷಣೆ ಮತ್ತು ಆಧ್ಯಾತ್ಮಿಕ ಸತ್ಯಾನ್ವೇಷಿಗಳಿಗೆ ಅಗತ್ಯವಾದ ಮಾರ್ಗದರ್ಶನ. ಈ ಉದ್ದೇಶಗಳ ಸಾಧನೆಗೆ, ಚಕ್ರವರ್ತಿಗಳು ರಾಜಮಹಾರಾಜರು ಮತ್ತು ಜನತೆಯಿಂದ ತಾನಾಗಿ ಸ್ವಯಂ ಇಚ್ಛೆಯಿಂದ ಬಂದ ಸಹಕಾರವನ್ನು ಸ್ವೀಕರಿಸುತ್ತಿದ್ದರೇ ವಿನಃ, ತಾವಾಗಿ ಅವರು ಯಾವುದನ್ನೂ ಅಪೇಕ್ಷಿಸುತ್ತಿರಲಿಲ್ಲ. ತಮ್ಮ ಗುರುಗಳು ಪೀಠವನ್ನು ಸ್ಥಾಪಿಸಿದಾಗ ಅವರಿಗೆ ಪೀಠವು ಮುಂದೆ ಗಳಿಸಬಹುದಾದ ಆಸ್ತಿ ಐಶ್ವರ್ಯಗಳಲ್ಲಿ ಹೇಗೆ ಎಳ್ಳಷ್ಟೂ ಅಪೇಕ್ಷೆ ಇರಲಿಲ್ಲವೋ ಹಾಗೆಯೇ ಶೃಂಗೇರಿಯ ಆಚಾರ್ಯರು ತಮ್ಮ ಶಿಷ್ಯರು ಕೊಡುತ್ತಿದ್ದ ಐಶ್ವರ್ಯಕ್ಕೆ ಹೆಚ್ಚು ಪ್ರಾಮುಖ್ಯವನ್ನು ನೀಡದೆ, ಮಠದ ಲೌಕಿಕ ಪ್ರಗತಿಯತ್ತ ಅಗತ್ಯವಾದಷ್ಟು ಮಾತ್ರವೇ ಗಮನವಿತ್ತು, ತಮ್ಮ ಮಾರ್ಗದರ್ಶನವನ್ನು ಅಪೇಕ್ಷಿಸಿ ಬರುವ ಶಿಷ್ಯರ ಆಧ್ಯಾತ್ಮಿಕ ಪ್ರಗತಿಯತ್ತ ಆದ್ಯಗಮನ ನೀಡುತ್ತಿದ್ದರು. ಆಸ್ತಿಪಾಸ್ತಿಗಳ ನಷ್ಟಕ್ಕಾಗಿ ಪರಿತಪಿಸದೆ, ತಮ್ಮ ತಪಸ್ಸು ಶಿಷ್ಯರ ನೈತಿಕ ಪುನರುತ್ಥಾನಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡುತ್ತಿದ್ದರು. ಈ ನಿರ್ಲಿಪ್ತ ಮನೋಭಾವ, ತಾಟಸ್ಥ್ಯದ ಧೋರಣೆಗಳಿಂದ, ಮಠದ ಆಸ್ತಿಪಾಸ್ತಿಗಳು ಬೇರೆಯವರಿಂದ ಅಪಹರಿಸಲ್ಪಟ್ಟು, ಮಠದ ನಿತ್ಯದ ಕಾರ್ಯ ಕಲಾಪಗಳಿಗೆ ತೀರಾ ಕಷ್ಟವಾದಾಗ, ಶೃಂಗೇರಿಯ ಆಚಾರ್ಯರು ಪರಂಪರೆಯಿಂದ ಬಂದುದನ್ನು ರಕ್ಷಿಸಿಕೊಳ್ಳುವ ಸಲುವಾಗಿ ಶಿಷ್ಯರಾಗಿದ್ದ ರಾಜರ ಸಹಕಾರವನ್ನು ಅಪೇಕ್ಷಿಸಿ, ಸ್ವೀಕರಿಸುತ್ತಿದ್ದರು.

ದಕ್ಷಿಣ ದೇಶದಲ್ಲೆಲ್ಲಾ ಕ್ಷೋಭೆ, ವಿಪ್ಲವ, ರಾಜಕೀಯ ಕ್ರಾಂತಿಗಳು ನಡೆಯುತ್ತಿದ್ದ ಸಂದರ್ಭದಲ್ಲಿ, ಕೇಂದ್ರ ಸರ್ಕಾರವಾದ ವಿಜಯನಗರದ ಆಶ್ರಯವನ್ನು ಸಂಪೂರ್ಣವಾಗಿ ಕಳೆದುಕೊಂಡಿದ್ದು, ಪುಂಡರಾದ ಪಾಳೆಯಗಾರರ ಮುಷ್ಠಿಯಲ್ಲಿ ಸಿಕ್ಕಿದ್ದ ಶೃಂಗೇರಿಯನ್ನು ಇಕ್ಕೇರಿಯ ಅರಸರ ಸಮಯೋಚಿತವಾದ ಸಹಕಾರದಿಂದ ರಕ್ಷಿಸಿ ಮತ್ತೆ ಮೊದಲಿನ ವೈಭವದ ಸ್ಥಿತಿಗೆ ತಂದು, ಧರ್ಮಧ್ವಜವನ್ನು ಸುಸ್ಥಿರವಾಗಿ ನಿಲ್ಲಿಸಿದ ಮಹಾತ್ಮರೇ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಸಚ್ಚಿದಾನಂದ ಭಾರತೀ ಸ್ವಾಮಿಗಳವರು; ಶೃಂಗೇರಿ ಪೀಠದ ಇಪ್ಪತ್ತೈದನೆಯ ಆಚಾರ್ಯರು.

೨

ತಮಿಳು ನಾಡಿನ ಮಧುರೈ ಜಿಲ್ಲೆಯ ಶ್ರೀಕಂಠೇಶ್ವರಪುರಂ ಎಂಬ ಅಗ್ರಹಾರದಲ್ಲಿ ಅಲಕಾದ್ರಿ ಭಟ್ಟರೆಂಬ ಸದ್ಗೃಹಸ್ಥರಿದ್ದರು. ತಿರುಮಲಾಂಬ ಆತನ ಸತಿ. ಯಜುಶ್ಶಾಖೆಯ ಗಾರ್ಗ್ಯ ಗೋತ್ರಕ್ಕೆ ಸೇರಿದ್ದ ಅಲಕಾದ್ರಿ ಭಟ್ಟರು ಯಜುರ್ವೇದದಲ್ಲಿ ಸಾಂಗವಾದ ಅಧ್ಯಯನ ಮಾಡಿ, ಕರ್ಮನಿಷ್ಠ ರಾಗಿ ಜೀವನ ನಡೆಸುತ್ತಿದ್ದರು. ಬಡತನವಿದ್ದರೂ ತೃಪ್ತ ಸಂತುಷ್ಟ ಜೀವನ ನಡೆಸಿಕೊಂಡು ಇದ್ದ ಈ ದಂಪತಿಗಳಿಗೆ ಜನಿಸಿದ ಮೊದಲ ಶಿಶುವೇ ಮುಂದೆ ಶ್ರೀ ಸಚ್ಚಿದಾನಂದ ಭಾರತೀ ಎಂದು ಶೃಂಗೇರಿ ಜಗದ್ಗುರು ಪೀಠವನ್ನು ಅಲಂಕರಿಸಿದ್ದ ಶ್ರೀ ನರಸಿಂಹ.

ನರಸಿಂಹನ ಜನನವಾದುದು ಆಗಸ್ಟ್ ಐದರಂದು, ೧೬೦೭ ನೆಯ ಇಸವಿ, ಮಹಾಪುರುಷರ ಜನನಕ್ಕೆ ಮುನ್ನ ಆ ಮಾತಾಪಿತರಿಗೆ ಆಗುವ ಶುಭ ಶಕುನ, ಸ್ವಪ್ನ ಸೂಚನೆಗಳಂತೆ ತಿರುಮಲಾಂಬರವರಿಗೂ ತಮ್ಮ ಕುಮಾರನ ಜನನಕ್ಕೆ ಮೊದಲು ಆದ ದಿವ್ಯ ಸ್ವಪ್ನವೊಂದರಲ್ಲಿ, ಮಹಾಪುರುಷನೊಬ್ಬನು ತನಗೆ ಶ್ವೇತಶಂಖವನ್ನು ಇತ್ತಂತೆ ಅನುಭವವಾಗಿತ್ತು. ಅದು ಅತ್ಯಂತ ಒಳ್ಳೆಯ ಶಕುನವೆಂದು ದಂಪತಿಗಳು ಭಾವಿಸಿ, ಹರ್ಷಪಟ್ಟಿದ್ದರು. ಅದಾದ ಸ್ವಲ್ಪದಿನಕ್ಕೇ ಪುತ್ರನ ಜನನವಾಗಿ, ಆ ಮಗುವಿಗೆ ಮನೆದೇವರ ಹೆಸರಾದ ನರಸಿಂಹ- ಎಂದು ನಾಮಕರಣ ಮಾಡಿದರು. ಅದಾದ ನಾಲ್ಕು ವರ್ಷಕ್ಕೆ ಮತ್ತೊಮ್ಮೆ ಪುತ್ರೋತ್ಸವವಾಗಿ, ಆ ಮಗುವಿಗೆ ಬ್ರಹ್ಮನೆಂದು ಹೆಸರಿಟ್ಟರು.

ನರಸಿಂಹನಿಗೆ ಕೇವಲ ಐದುವರ್ಷ ನಡೆಯುತ್ತಿದ್ದಾಗಲೇ ತಾಯಿ ತಿರುಮಲಾಂಬಾ ವಿಧಿವಶವಾದರು. ಪತ್ನಿಯ ಮರಣದಿಂದ ತುಂಬಾ ದುಃಖಿತರಾದ ಅಲಕಾದ್ರಿ ಆ ನೋವು ವ್ಯಸನಗಳು ಮಾಯಲು ಸ್ವಲ್ಪಕಾಲ ಊರುಬಿಟ್ಟು ಹೋಗಲು ನಿರ್ಧರಿಸಿ, ಮಕ್ಕಳಿಬ್ಬರನ್ನೂ ಭಾವಮೈದುನ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಲ್ಲಾವಧಾನಿಯಲ್ಲಿ—ಅವರು ವೀರ ಭೂಪಾಲ ಸಮುದ್ರದಲ್ಲಿ ಇದ್ದರು—ಬಿಟ್ಟು ತಾವು ಒಬ್ಬರೇ, ತೀರ್ಥಯಾತ್ರೆಗೆ ಹೊರಟರು.

ತೀರ್ಥಯಾತ್ರೆ ಮುಗಿಸಿಕೊಂಡು ಹಿಂದಿರುಗುವ ವೇಳೆಗೆ ಅವರಿಗೆ ಶಾಂತಿ ಸಮಾಧಾನಗಳು ಲಭಿಸಿದ್ದುವು. ಸಾವು ನೋವುಗಳು ಯಾರನ್ನೂ ಬಿಟ್ಟಿಲ್ಲವೆಂಬುದು ಅವರಿಗೆ ದೇಶಾಟನೆಯಿಂದ ಸ್ವಾನುಭವಕ್ಕೆ ಬಂದಿತ್ತು. ಊರಿಗೆ ಹಿಂದಿರುಗಿದ ನಂತರ ಮಕ್ಕಳಿಬ್ಬರನ್ನೂ ಶ್ರೀಕಂಠೇಶ್ವರ ಪುರಕ್ಕೆ ಕರೆಸಿಕೊಂಡು ನರಸಿಂಹನಿಗೆ ಉಪನಯನವನ್ನೂ ನೆರವೇರಿಸಿದರು.

ನರಸಿಂಹನಿಗೆ ವೇದ ವಿದ್ಯಾಭ್ಯಾಸ ಮಾಡಿಸಲು ರಾಮಭಟ್ಟರೆಂಬ ವಿದ್ವಾಂಸರಲ್ಲಿ ಬಿಟ್ಟರು. ಬಾಲಕನು ಅತಿ ಶೀಘ್ರದಲ್ಲಿಯೇ ವೇದಾಧ್ಯಯನದಲ್ಲಿ ತಾನು ಪರಿಣತಮತಿಯೆಂಬುದನ್ನು ತೋರಿಸಿದನು. ಗುರುಗಳು ಹೇಳಿಕೊಟ್ಟ ಪಾಠವನ್ನು ಕ್ರಮವಾಗಿ ಕಂಠಪಾಠ ಮಾಡಿ ಹೃದ್ಗತ ಮಾಡಿಕೊಂಡನು.

ಅಲಕಾದ್ರಿ ಭಟ್ಟರು ಮತ್ತೊಮ್ಮೆ ತೀರ್ಥಯಾತ್ರೆ ಮಾಡುವ ಸಂಕಲ್ಪ ಗೈದು, ತಮ್ಮ ದ್ವಿತೀಯ ಭಾರ್ಯೆಯೊಡನೆ ಪುನಃ ಸಂಚಾರಕ್ಕೆ ಹೊರಟರು. ಆಗಲೂ ಸಹ ಮಕ್ಕಳಿಬ್ಬರನ್ನೂ ಭಾವಮೈದುನನ ಮನೆಯಲ್ಲಿಯೇ, ವೀರ ಭೂಪಾಲ ಸಮುದ್ರದಲ್ಲಿಯೇ, ಬಿಟ್ಟರು.

ತಮ್ಮ ಸೋದರ ಮಾವನ ಮನೆಯಲ್ಲಿ ಪ್ರಗತಿಹೊಂದುತ್ತಿದ್ದ ಬಾಲಕರು, ಅವರಿಗೆ ಅಚ್ಚುಮೆಚ್ಚಾಗಿದ್ದರು. ಸ್ವಲ್ಪ ದಿನಗಳು ಕಳೆಯಲು ವೀರ ಭೂಪಾಲ ಸಮುದ್ರದಲ್ಲಿ ಢಕಾಯಿತರ ಹಾವಳಿಗೆ ಆರಂಭವಾಗಲು, ಹೆದರಿದ ಜನ ಊರನ್ನೇ ಬಿಟ್ಟರು. ಕ್ರಮೇಣ ನಿರ್ಜನವಾಗುತ್ತಿದ್ದ ಗ್ರಾಮವನ್ನು ಬಿಟ್ಟು ದೂರವೆಲ್ಲಾದರೂ ವಲಸೆ ಹೋಗುವುದೆಂದು ಯಲ್ಲಾವಧಾನಿಯೂ ಯೋಚಿಸಿದರು. ತಮ್ಮ, ಅಣ್ಣನವರಾಗಿದ್ದ ವೆಂಕಟಾಚಲ ಯಜ್ವರು ವಾಸಿಸುತ್ತಿದ್ದ ಶೃಂಗೇರಿಗೆ ಹೋಗುವುದೆಂದೂ ನಿರ್ಧರಿಸಿದರು. ಬಹುಕಾಲದಿಂದಲೂ ಶೃಂಗೇರಿಯಲ್ಲಿಯೇ ನೆಲಸಿದ್ದ ವೆಂಕಟಾಚಲ ಯಜ್ವರು ಅಗ್ನಿಹೋತ್ರಾದಿಗಳನ್ನು ನಿತ್ಯವೂ ನಡೆಸುತ್ತ, ಯಜ್ಞಯಾಗಾದಿಗಳನ್ನೂ ಆಗಾಗ ನಡೆಸುತ್ತಿದ್ದ ಕರ್ಮಠರು. ಗುರುಗಳವರ ಗಾರವ, ವಿಶ್ವಾಸಗಳಿಗೆ ಭಾಜನರಾಗಿದ್ದರು. ಮಠದಲ್ಲಿ ವಿದ್ವಾಂಸರಾಗಿಯೂ ಇದ್ದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆದೇ ವೇಳೆಗೆ ತಮ್ಮ ಸಂಚಾರವನ್ನು ಮುಗಿಸಿಕೊಂಡು ಅಲಕಾದ್ರಿ ಭಟ್ಟರು ವೀರಭೂಪಾಲ ಸಮುದ್ರಕ್ಕೆ ಬಂದರು. ಅಲ್ಲಿ ತಮ್ಮ ಭಾವಮೈದುನನು ಶೃಂಗೇರಿಗೆ ಹೊರಡಲಿರುವುದನ್ನು ಕೇಳಿ, ತಾವೂ ತೀರ್ಥಯಾತ್ರೆಯ ಸಮಯದಲ್ಲಿ ಶೃಂಗೇರಿಗೆ ಹೋಗಿದ್ದುದಾಗಿಯೂ, ಅಲ್ಲಿ ಹಿರಿಯ ಭಾವಮೈದುನ ವೆಂಕಟಾಚಲ ಯಜ್ವರಲ್ಲಿಯೇ ಇದ್ದು ಶ್ರೀ ಶಾರದಾ ಗುರು ದರ್ಶನ ಮಾಡಿದುದಾಗಿಯೂ ಅಲಕಾದ್ರಿ ತಿಳಿಸಿದರು.

ಅಲ್ಲಿಂದ ತಮ್ಮ ಮಕ್ಕಳನ್ನು ಕರೆದುಕೊಂಡು ಹೊರಟ ಅಲಕಾದ್ರಿ ಮಧುರೈ ನಗರಕ್ಕೆ ಬಂದು ಅಲ್ಲಿಯೇ ನೆಲಸಿದರು. ಯಲ್ಲಾವಧಾನಿಗಳು ಸಂಸಾರ ಸಮೇತ ಶೃಂಗೇರಿಗೆ ಪ್ರಯಾಣ ಮಾಡಿದರು.

ಮಧುರೈ ನಗರದಲ್ಲಿ ಮತ್ತೆ ಮಕ್ಕಳಿಬ್ಬರಿಗೂ ವಿದ್ಯಾಭ್ಯಾಸ ಆರಂಭವಾಯಿತು. ಅಲಕಾದ್ರಿಯ ಮಾವ—ಎರಡನೆಯ ಹೆಂಡತಿಯ ತಂದೆ—ನರಸಿಂಹಭಟ್ಟ—ಪ್ರತಿದಿನವೂ ರಾಮಾಯಣ ಪಾರಾಯಣ ಮಾಡುತ್ತಿದ್ದರು. ಅವರು ಬಾಲಕರಿಗೆ ಅರ್ಥಸಹಿತವಾಗಿ ರಾಮಾಯಣವನ್ನು ವಿವರವಾಗಿ ಪ್ರವಚನ ರೂಪದಲ್ಲಿ ಹೇಳುತ್ತಿದ್ದರು. ಈ ಪ್ರವಚನದಿಂದ ಬಾಲಕರಿಬ್ಬರ ಮನಸ್ಸಿನ ಮೇಲೂ ಮಹತ್ತರವಾದ ಪರಿಣಾಮವಾಯಿತು. ಅವರಿಗೆ ಗುರುಭಕ್ತಿಯೂ, ಮಾತಾಪಿತರಲ್ಲಿ ಗೌರವವೂ ವೃದ್ಧಿಯಾದುವು. ರಾಮಾಯಣದ ಪಾತ್ರಗಳ ಆದರ್ಶವು ಮಕ್ಕಳಿಗೆ ಮಾರ್ಗದರ್ಶನ ನೀಡುವ ಸೂಚಿಯಾಯಿತು.

ಮಧುರೈ ನಗರದಲ್ಲಿ ಇದ್ದಾಗಲೇ, ಅಲಕಾದ್ರಿ ಸಂಸಾರ ಸಮೇತ ರಾಮೇಶ್ವರ ಯಾತ್ರೆ ಮಾಡಿದ್ದರು. ಚಿಕ್ಕುಮಗ ಬ್ರಹ್ಮನಿಗೆ ಉಪನಯನವನ್ನೂ ಮಾಡಿದ್ದರು. ಮಧುರೆಯಲ್ಲಿ ಜೀವನ ಸುಖಮಯವಾಗಿ ಸಾಗಿತ್ತು.

೩

ಸ್ವಲ್ಪ ದಿನಗಳು ಸಂತೋಷವಾಗಿಯೇ ಕಳೆದುವು. ಕಾಲಚಕ್ರ ಉರುಳಿತು. ಸುಖದ ದಿನಗಳು ಕಳೆಯಲು ಕಷ್ಟದ ದಿನಗಳು ಕಾಣಿಸಿಕೊಂಡುವು. ಪಾಂಡ್ಯರಾಜ್ಯವನ್ನು ಬಲವಾದ ಕ್ಷಾಮವು ಪೀಡಿಸಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮಧುರೈ ನಗರವೂ ಅದಕ್ಕೆ ಹೊರತಾಗಲಿಲ್ಲ. ನಿರ್ಧನರೂ, ಬಡವರೂ ಆಗಿದ್ದ ಜನಕ್ಕೆ ಜೀವನ ದುಸ್ತರವಾಗಿತ್ತು. ಮಳೆಯಿಲ್ಲ, ಬೆಳೆಯಿಲ್ಲ. ವೈಗೈನದಿ ಪೂರ್ಣವಾಗಿ ಒಣಗಿ ಸತ್ತ ಹೆಬ್ಬಾವಿನಂತೆ ಬಿದ್ದಿತ್ತು. ಕಾದ ಮರಳಿನ ಝಳವೂ ಬಿಸಿಲಿನ ತಾಪವೂ ಹಸಿದ ಹೊಟ್ಟೆಗಳನ್ನೂ ಬೇಯಿಸಿದುವು. ದನಕರುಗಳೂ ನೀರು-ಮೇವನ್ನು ಕಾಣದೆ ಸೊರಗಿದುವು. ಜನಗಳು ಕಂಗಾಲಾದರು. ಅನೇಕರು ಊರು ಬಿಟ್ಟು ವಲಸೆ ಹೋದರು.

ಇಂತಹ ಸಂದರ್ಭದಲ್ಲಿ ಅಲಕಾದ್ರಿಗೂ ತೆರೆದಿದ್ದ ಮಾರ್ಗ ಅದೊಂದೇ, ಊರು ಬಿಟ್ಟು ವಲಸೆ ಹೋಗುವುದು. ತೆನ್ನ ಹಿರಿಯ ಮಗನನ್ನು ವೀರ ಭೂಪಾಲ ಸಮುದ್ರದಲ್ಲಿದ್ದ ಮತ್ತೊಬ್ಬ ಬಂಧುವಿನ ಮನೆಗೆ ಕಳಿಸಿ, ತಾವು ಹೆಂಡತಿ ಮತ್ತು ಕಿರಿಮಗ ಬ್ರಹ್ಮನೊಡನೆ, ಶೋಲವಂದನ್, ರಾಮನಾಥ ಪುರಂ, ಮುಲಪ್ಪನಾಯಕಪುರಂ, ವೀರಭೂಪಾಲ ಸಾಗರಂ, ಕೀಲಮಂಗಲಂ ಮೇಲ್‌ಮಂಗಲಂ ಮುಂತಾದ ಸ್ಥಳಗಳಲ್ಲಿ ಸ್ವಲ್ಪ ಸ್ವಲ್ಪ ದಿನಗಳಿರುತ್ತ, ಮನಾಮಧುರಾ ಪಟ್ಟಣಕ್ಕೆ ಹೋದರು.

ನರಸಿಂಹನು ವೀರಭೂಪಾಲ ಸಮುದ್ರದಲ್ಲಿ ಅನ್ನಪೂರ್ಣ ಎಂಬಾಕೆಯ ಮನೆಯಲ್ಲಿ ಆಶ್ರಯ ಪಡೆದು, ಭಿಕ್ಷಾಟನದಿಂದ ಜೀವನ ಸಾಗಿಸಲಾರಂಭಿಸಿದ್ದನು. ಅಲ್ಲಿಯೇ ಇದ್ದ ಕಾಶೀಭಟ್ಟರೆಂಬುವರಲ್ಲಿ ಅಮರಕೋಶವನ್ನು ಅಧ್ಯಯನ ಮಾಡಿದನು. ವೀರಭೂಪಾಲ ಸಮುದ್ರದಲ್ಲಿ ಇನ್ನೊಬ್ಬ ಸೋದರ ಮಾವನೂ ಇದ್ದರು. ಅವರು ಯಾರೊಡನೆಯೋ ಮಾತಿನ ಸಂದರ್ಭದಲ್ಲಿ, ನರಸಿಂಹನು ಅನುಕೂಲವಾದ ಪರಿಸ್ಥಿತಿಯಲ್ಲಿ ಇದ್ದಿದ್ದರೆ, ತಮ್ಮ ಅಣ್ಣ ಶೃಂಗೇರೀ ವೆಂಕಟಾಚಲಯಜ್ವರು ಅವನನ್ನು ಆಳಿಯನನ್ನಾಗಿ ಮಾಡಿಕೊಳ್ಳುತ್ತಿದ್ದರು, ಎಂದು ಹೇಳಿದ್ದರು. ಈ ಮಾತು ನರಸಿಂಹನ ಕಿವಿಗೆ ಬಿದ್ದು, ತಾನು ವೀರಭೂಪಾಲ ಸಮುದ್ರದಲ್ಲಿ ಮಧುಕರಿಯಿಂದ ಜೀವಿಸುವುದು ಸೋದರ ಮಾವನ ಘನತೆಗೆ ಊನ ತರಬಹುದೆಂದು ಭಾವಿಸಿ, ತನ್ನ ತಂದೆಯಿದ್ದ ಮನಾಮಧುರೆಗೆ ಬಂದುಬಿಟ್ಟನು.

ಅದೇ ಸಮಯದಲ್ಲಿ ಶೃಂಗೇರಿಯ ನಿವಾಸಿಗಳಾದ ಅಪ್ಪಾಭಟ್ಟ ಮತ್ತು ಕೊಂಡಭಟ್ಟರೆಂಬ ಇಬ್ಬರು ಬ್ರಾಹ್ಮಣ ಸೋದರರು-ಅಲಕಾದ್ರಿಗೆ ದೂರದ

Sri Vidyabharathi Book Centre, Sringeri

CC-O. In Public Domain. Digitized by eGangotri

ಬಂಧುಗಳೂ ಆಗಬೇಕು—ರಾಮೇಶ್ವರ ಯಾತ್ರೆಯ ಮಾರ್ಗದಲ್ಲಿ ಮುನಾ ಮಧುರೆಗೆ ಬಂದರು. ಅವರು ತಮ್ಮೊಡನೆ ಶೃಂಗೇರಿಯ ವೆಂಕಟಾಚಲ ಯಜ್ವರಿಂದ ಪರಿಚಯ ಪತ್ರವನ್ನು ತಂದಿದ್ದರು. ಆ ಪತ್ರವನ್ನು ನೋಡಿ ಅಲಕಾದ್ರಿಗೆ ಸಂತೋಷವಾಯಿತು. ಅದರಲ್ಲಿ ನರಸಿಂಹನನ್ನು ತಮ್ಮ ಅಳಿಯನನ್ನಾಗಿ ಮಾಡಿಕೊಳ್ಳುವ ಅಪೇಕ್ಷೆಯನ್ನು ವೆಂಕಟಾಚಲಯಜ್ವರು ವ್ಯಕ್ತಪಡಿಸಿ, ನರಸಿಂಹನನ್ನು ಶೃಂಗೇರಿಗೆ, ಈ ಯಾತ್ರಿಕರೊಡನೆಯೇ ಕಳಿಸ ಬೇಕೆಂದು ಕೇಳಿದ್ದರು. ಮಗನನ್ನು ಶೃಂಗೇರಿಗೆ ಕಳಿಸಲು ಅಲಕಾದ್ರಿ ಸಂತೋಷದಿಂದ ಒಪ್ಪಿದರೂ, ಅನುಮಾನದಿಂದ ಕೂಡಲೇ ನಿರ್ಧಾರಕ್ಕೆ ಬರಲಿಲ್ಲ. ಅದಕ್ಕೆ ಕಾರಣವೂ ಇತ್ತು.

ಹಿಂದೆ ಅಲಕಾದ್ರಿ ತೀರ್ಥಯಾತ್ರೆ ಮಾಡುತ್ತಿದ್ದ ಸಮಯದಲ್ಲಿ ಶೃಂಗೇರಿಗೂ ಹೋಗಿದ್ದರಷ್ಟೆ? ಆಗ ಪೀಠಾಧಿಪತಿಗಳಾಗಿದ್ದ ಅಭಿನವ ಶ್ರೀ ನರಸಿಂಹಭಾರತೀ ಸ್ವಾಮಿಗಳ ದರ್ಶನವನ್ನು ಮಾಡಿದ್ದರು. ವೃದ್ಧರಾಗಿದ್ದ ಆ ಗುರುಗಳು ಶಿಷ್ಯ ಪರಿಗ್ರಹಣ ಮಾಡುವ ಸಂಕಲ್ಪವುಳ್ಳವರಾಗಿದ್ದು, ಹಲವಾರು ಜನ ವಟುಗಳನ್ನು ಕರೆಸಿಕೊಂಡು ಪರೀಕ್ಷಿಸಿದ್ದರು. ಆ ಸಂದರ್ಭದಲ್ಲಿ ಅಲಕಾದ್ರಿಯ ಮಗ ನರಸಿಂಹನಿಗೆ ಸನ್ಯಾಸ ತೆಗೆದು ಕೊಳ್ಳುವ ಏನಾದರೂ ಇಚ್ಛೆಯಿದೆಯೆ?, ಅಲಕಾದ್ರಿ ಅದಕ್ಕೆ ಒಪ್ಪುವರೆ? ಎಂದು ಪರ್ಯಾಯವಾಗಿ ವಿಚಾರಿಸಿದ್ದರು. ಗುರುಗಳು ಹೀಗೆ ಕೇಳಲು ಕಾರಣವೂ ಇತ್ತು. ಅಲಕಾದ್ರಿಯ ಮೊದಲ ಅಣ್ಣ—ಅವರ ಹೆಸರೂ ನರಸಿಂಹ ಎಂದೇ–ಬ್ರಹ್ಮಚಾರಿಯಾಗಿ ಇದ್ದಾಗಲೇ ಸನ್ಯಾಸ ಸ್ವೀಕರಿಸಿದ್ದರು. ಶ್ರೀ ನಾರಾಯಣಾಶ್ರಮ ಎಂಬುದು ಅವರ ಆಶ್ರಮನಾಮ. ಅಲಕಾದ್ರಿ ಸ್ಪಷ್ಟವಾಗಿ ಆ ಸೂಚನೆಗಳನ್ನು ತಳ್ಳಿಹಾಕಿದ್ದರು. ಈಗ ಮಗನಿಗೆ ಶೃಂಗೇರಿಯಿಂದ ಬಂದಿರುವ ಆಹ್ವಾನಕ್ಕೂ, ಹಿಂದೆ ಸೂಚಿತವಾಗಿದ್ದ ಸನ್ಯಾಸದ ವಿಷಯಕ್ಕೂ ಏನಾದರೂ ಸಂಬಂಧ ಇರಬಹುದೇನೋ ಎಂದು ಅಲಕಾದ್ರಿ ಅನುಮಾನಿಸಿದರು. ಆದರೆ ಈ ಯಾತ್ರಿಕರೊಡನೆಯೇ ಇದ್ದ ಗಂಗಾಧರ ಭಟ್ಟ ಎಂಬುವರು ಸ್ವಾಮಿಗಳು ಶಿಷ್ಯಸ್ವೀಕಾರಕ್ಕೆ ಬೇರೊಬ್ಬ ವಟುವನ್ನು ಆರಿಸಿರುವರೆಂದೂ, ಅಲಕಾದ್ರಿ ಚಿಂತಿಸುವ ಕಾರಣವಿಲ್ಲವೆಂದೂ ತಿಳಿಸಲು, ಅವರ ಮನಸ್ಸಿನ ಅನುಮಾನ ಪರಿಹಾರ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾಗಿ ನೆಮ್ಮದಿಯಾಯಿತು. ಮಗನನ್ನು ಶೃಂಗೇರಿಗೆ ಕಳಿಸಲು ಒಪ್ಪಿದರು.

ಯಾತ್ರಿಕರು ನರಸಿಂಹನನ್ನು ಕರೆದುಕೊಂಡು ಹೊರಟು ಅವನಿಗೆ ಮತ್ತೊಮ್ಮೆ ರಾಮೇಶ್ವರದರ್ಶನ ಮಾಡಿಸಿದರು. ಅಲ್ಲಿಂದ ಮರುಪ್ರಯಾಣ ಹೊರಟು ತಿರುಚಿರಾಪಳ್ಳಿಗೆ ಬಂದು ಅಲ್ಲಿಯೇ ಎರಡು ತಿಂಗಳಕಾಲ ಬಿಡಾರ ಮಾಡಿದರು. ಅದೇ ವೇಳೆಗೆ ಅಲಕಾದ್ರಿಯೂ ಸಂಸಾರ ಸಮೇತನಾಗಿ ಬಂದು ಅವರನ್ನು ಸೇರಿಕೊಂಡರು.

ತೀರ್ಥಯಾತ್ರೆಗಾಗಿ ಹೊರಟಿದ್ದ ಈ ಸೋದರರಲ್ಲಿ ಅಪ್ಪಾಭಟ್ಟರು ಸ್ವಲ್ಪಮಟ್ಟಿಗೆ ಸ್ಥಿತಿವಂತರಾಗಿದ್ದರು. ಅವರೇ ಈ ತೀರ್ಥಯಾತ್ರೆಯ ಖರ್ಚಿಲ್ಲವನ್ನೂ ವಹಿಸಿಕೊಂಡಿದ್ದು, ಪ್ರಯಾಣಕ್ಕೆ ಅನುಕೂಲವಿರದಂತಹ ಆ ಕಾಲದಲ್ಲಿ ನಾಲ್ಕು ಕುದುರೆಗಳನ್ನು ತಮ್ಮೊಡನೆ ತಂದಿದ್ದರು. ಆಗ ತಾನೇ ಮಧುರೆಯಲ್ಲಿ ಪಟ್ಟಾಭಿಷಕ್ತನಾಗಿದ್ದ ದೊರೆ ತಿರುಮಲನಾಯಕನು ತಿರುಚಿನಾಪಳ್ಳಿಗೆ ಬರುವ ಸುದ್ದಿ ಕೇಳಿಕೊಂಡ ಭಟ್ಟರು ಸ್ವಲ್ಪಕಾಲ ಅಲ್ಲಿಯೇ ಇರುವ ಬಯಕೆಯನ್ನು ವ್ಯಕ್ತಪಡಿಸಲು, ಎರಡು ಕುದುರೆಗಳನ್ನು ಅವರ ಪ್ರಯಾಣಕ್ಕಾಗಿ ಬಿಟ್ಟು, ಅಪ್ಪಾಭಟ್ಟರು ತಮ್ಮ ಪತ್ನಿಯೊಡನೆ ಶೃಂಗೇರಿಯತ್ತ ಪ್ರಯಾಣ ಹೊರಟರು.

ಅವರೊಡನೆಯೇ ನರಸಿಂಹನೂ ಅನ್ನಪೂರ್ಣೆಯೂ ಹೊರಟರು. ಎರಡೇ ಕುದುರೆಗಳು ಇದ್ದುದರಿಂದ ಇವರಿಬ್ಬರೂ ನಿಧಾನವಾಗಿ ಸಾಗುತ್ತಿದ್ದ ಅಶ್ವಗಳೊಡನೆ ನಡೆದೇ ಹೊರಟರು. ಕೇವಲ ಹದಿನಾಲ್ಕು ವರ್ಷದ ಬಾಲಕನಾಗಿದ್ದ ನರಸಿಂಹನು ನೂರಾರು ಮೈಲಿ ಪ್ರಯಾಣದಲ್ಲಿ ದಣಿದು, ಬೇಸರಗೊಳ್ಳದಂತೆ ಅನ್ನಪೂರ್ಣೆ ಅವನನ್ನು ಮಮತೆಯಿಂದ ತಾಯಿಯಂತೆ ನೋಡಿಕೊಂಡರು. ದಾರಿಯುದ್ದಕ್ಕೂ ಅನೇಕ ಪುರಾಣಗಳ ಪುಣ್ಯ ಕಥೆಗಳನ್ನು ಹೇಳುತ್ತ ಅವನ ಪ್ರಯಾಣದ ಆಯಾಸವನ್ನು ಕಡಿಮೆ ಮಾಡಿದರು.

ಕಾಡುಮೇಡು, ಬೆಟ್ಟಗುಡ್ಡ, ನದಿಹೊಳೆಗಳನ್ನೂ, ಅನೇಕ ಅಗ್ರಹಾರ, ಗ್ರಾಮ, ನಗರಗಳನ್ನೂ ದಾಟುತ್ತ, ಈ ಯಾತ್ರಿಕರು ಸತ್ಯಮಂಗಲದಲ್ಲಿ ಕಣಿವೆಯನ್ನು ಹತ್ತಿದರು. ಕನ್ನಡ ನಾಡಿಗೆ ಬಂದು, ಕಾವೇರಿಯ ತೀರದಲ್ಲಿಯೇ ನಡೆಯುತ್ತ, ಅನೇಕ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿದರು,

Sri Vidyabharathi Book Centre, Sringeri

CC-O. In Public Domain. Digitized by eGangotri

ತಿರುನುಕೂಡಲು, ಶ್ರೀರಂಗಪಟ್ಟಣ, ಎಡತೊರೆ, ಬೇಲೂರು ಮುಂತಾದ ಸ್ಥಳಗಳನ್ನು ನೋಡಿಕೊಂಡು, ಮಲೆನಾಡಿನ ಸೌಂದರ್ಯದಿಂದ ಮುಗ್ಧರಾಗುತ್ತ ಶೃಂಗೇರಿಯನ್ನು ತಲುಪಿದರು.

ಸೋದರಳಿಯನನ್ನು ಕಂಡ ವೆಂಕಟಾಚಲಯಜ್ವರೂ, ಯಲ್ಲಾವ ಧಾನಿಯೂ ತುಂಬಾ ಹರ್ಷಿಸಿದರು. ಅವರ ತಾಯಿಯಲು ಬಹು ಕಾಲಾನಂತರ ಮೊಮ್ಮಗನನ್ನು ಕಂಡು ಬಹಳ ಸಂತೋಷಪಟ್ಟಳು.

ಚಿಕ್ಕ ಸೋದರಮಾವನ ಮನೆಯಲ್ಲಿಯೇ ಇರಲು ಇಚ್ಛಿಸಿದ ನರಸಿಂಹನು, ತರ್ಕವಿಾಮಾಂಸ ಶಾಸ್ತ್ರಗಳ ಅಧ್ಯಯನವನ್ನು ಆರಂಭಿಸಿದನು. ಮುಂದೆ ಆಳಿಯನಾಗಲಿದ್ದ ನರಸಿಂಹನಿಗೆ ವೆಂಕಟಾಚಲಯಜ್ವನು ಶ್ರೀಧರ ಕೃಷ್ಣಭಟ್ಟರೆಂಬ ವಿದ್ವಾಂಸರಿಂದ ಕಾವ್ಯ ಪಾಠವನ್ನೂ ಆರಂಭಿಸಿದರು. ಗಾರ್ಹಸ್ಥ್ಯ ಧರ್ಮಕ್ಕೆ ಅಗತ್ಯವಾಗಿದ್ದ ಅಗ್ನಿಹೋತ್ರಾದಿ ಹೋಮಗಳ ಪಾಠವನ್ನೂ ಇತರ ಇಷ್ಟಿಗಳನ್ನೂ ಕಲಿಸಲು ನರಸಿಂಹ ದೀಕ್ಷಿತರೆಂಬುವರನ್ನು ನೇಮಕ ಮಾಡಿದರು. ಅಧ್ಯಯನ ವ್ಯಾಸಂಗಗಳು ಎಡಬಿಡದೆ ಸಾಗಿದುವು.

ನರಸಿಂಹನು ಪ್ರತಿನಿದಿನವೂ ತಮ್ಮ ಗುರುಗಳ ದರ್ಶನಕ್ಕೂ ಶ್ರೀ ಶಾರದಾ, ಶ್ರೀ ವಿದ್ಯಾಶಂಕರ, ಶ್ರೀಮಲಹಾನಿಕೇಶ್ವರ ದೇವಾಲಯಗಳ ದರ್ಶನಕ್ಕೂ ಹೋಗಿ ಬರುತ್ತಿದ್ದನು. ತನ್ನ ಅಧ್ಯಯನ ಅಭ್ಯಾಸಗಳಲ್ಲಿ ದಿನೇದಿನೇ, ಅಭ್ಯುದಯವನ್ನು ಹೊಂದುತ್ತಿದ್ದು, ಸೋದರಮಾವಂದಿರಿಗೆ ಅಚ್ಚುಮೆಚ್ಚಾಗಿದ್ದನು.

೪

ಶೃಂಗೇರಿಯ ಪೀಠದಲ್ಲಿ ಆಗ (೧೫೯೯–೧೬೨೨) ವಿರಾಜಮಾನರಾಗಿದ್ದವರು ಶ್ರೀ ಅಭಿನವ ನರಸಿಂಹಭಾರತೀ ಸ್ವಾಮಿಗಳವರು.

ಮಹಾತಪಸ್ವಿಗಳೂ ಶ್ರೇಷ್ಠ ದಾರ್ಶನಿಕರೂ ಆಗಿದ್ದ ಈ ಆಚಾರ್ಯ ಮಂತ್ರಶಾಸ್ತ್ರವೇತ್ತರೂ ಆಗಿದ್ದರು. ವಿದ್ವಾಂಸರಿಗೆ ಆಶ್ರಯದಾತರಾಗಿದ್ದ ಈ ಸ್ವಾಮಿಗಳು ಶಿವಗೀತೆಗೆ ತಾವೇ ಸ್ವತಃ ಸಂಸ್ಕೃತ ವ್ಯಾಖ್ಯಾನವನ್ನೂ ರಚಿಸಿದ್ದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ದೇವಾಲಯಗಳ ಜೀರ್ಣೋದ್ಧಾರದಲ್ಲಿಯೂ ಪುನರ್ನಿರ್ಮಾಣದಲ್ಲಿಯೂ ಪ್ರೋತ್ಸಾಹವೀಯುತ್ತಿದ್ದ ಈ ಗುರುಗಳು ಸ್ವತಃ ಶ್ರೀರಾಮೇಶ್ವರ ಲಿಂಗವನ್ನು, ಶೃಂಗೇರಿಯ ಬಳಿ ಇರುವ ರುದ್ರಪಾದ ಎಂಬಲ್ಲಿ (೧೬೦೨) ಪ್ರತಿಷ್ಠೆ ಮಾಡಿದರು.[1] ತಮ್ಮ ಗುರುಗಳಾಗಿದ್ದ ಚತುರ್ಥ ಶ್ರೀ ನರಸಿಂಹ ಭಾರತೀ ಸ್ವಾಮಿಗಳವರ ಸ್ಮರಣೆಗಾಗಿ ನರಸಿಂಹಪುರ ಎಂಬ ಅಗ್ರಹಾರವನ್ನು ನಿರ್ಮಿಸಿದ್ದರು.[2]

ಶೃಂಗೇರಿಯ ಹರಿಹರದೇವಾಲಯಕ್ಕೆ ದತ್ತಿಯೊಂದು ಇವರ ಕಾಲದಲ್ಲಿ ೧೬೦೮ ರಲ್ಲಿ ಕೊಡಲ್ಪಟ್ಟಿತು.[3] ಶ್ರೀ ಸ್ವಾಮಿಗಳವರ ಆಜ್ಞೆಯ ಮೇರೆಗೆ ಪುಟ್ಟಪ್ಪಯ್ಯನೆಂಬಾತನು ಬೆಟ್ಟದ ಶ್ರೀ ಮಲ್ಲಿಕಾರ್ಜುನ ದೇವಾಲಯವನ್ನು ೧೬೨೧ ರಲ್ಲಿ ಪುನರ್ನಿರ್ಮಾಣ ಮಾಡಿದನು.[4]

ಶ್ರೀ ಗುರುಗಳು ತಮ್ಮ ಸಂಚಾರ ಕಾಲದಲ್ಲಿ ಅನೇಕ ದೇವಾಲಯಗಳನ್ನು ಸಂದರ್ಶಿಸಿ, ಅವ್ಯವಸ್ಥೆಗಳಿದ್ದ ಕಡೆಗಳಲ್ಲಿ ಪೂಜಾದಿಗಳನ್ನು ವೈದಿಕ ಕ್ರಮದಲ್ಲಿ ಏರ್ಪಡಿಸಿದರು. ಮೈಸೂರಿನ ರಾಜಒಡೆಯರ ಕೋರಿಕೆ ಮೇರೆಗೆ ಶಿವಗಂಗೆಯಲ್ಲಿ ಒಂದು ಮಠವನ್ನು ಸ್ಥಾಪಿಸಿ, ತಮ್ಮ ಶಿಷ್ಯರಾಗಿದ್ದ ಶ್ರೀ ಶಂಕರಭಾರತೀ ಸ್ವಾಮಿಗಳವರನ್ನು ಆ ಮಠದ ಅಧಿಪತಿಯನ್ನಾಗಿ ನೇಮಕ ಮಾಡಿದರು.[5] ಕೋಲಾರದ ಬಳಿಯಲ್ಲಿರುವ ಆವನೀಮಠವೂ ಈ ಸ್ವಾಮಿಗಳವರಿಂದಲೇ ಸ್ಥಾಪಿಸಲ್ಪಟ್ಟಿರಬಹುದೆಂದೂ ಊಹೆಯಿದೆ.[6]

ಶ್ರೀ ಗುರುಗಳು ಬೆಟ್ಟದ ಮಲಹಾನಿಕರೇಶ್ವರ ದೇವಾಲಯದಲ್ಲಿ ವಿನಾಯಕ ಮೂರ್ತಿಯಿಲ್ಲದುದನ್ನು ಗಮನಿಸಿ, ಆಲಯದ ಮುಂಭಾಗದಲ್ಲಿ (ಎಡಗಡೆ) ಕಲ್ಲಿನ ಕಂಭದ ಮೇಲೆ, ಪಶ್ಚಿಮಾಭಿಮುಖವಾಗಿರುವಂತೆ ಅರಿಸಿನದ ಕೊನೆಯಿಂದ ವಿನಾಯಕನ ಆಕಾರವನ್ನು ಬರೆದು, ಅದನ್ನೇ

1. MAR 1933 P 131
2. ಶೃಂ. ಶಾ. 2
3. ಶೃಂ. ಶಾ. 4
4. TTW P 47
5. TTW P 47
6. TTW P 47 and MAR 1929 P 88

Sri Vidyabharathi Book Centre, Sringeri

CC-O. In Public Domain. Digitized by eGangotri

ಅರ್ಚನೆ ಮಾಡಿದರು. ಅಂದಿನಿಂದ ಆ ರೇಖಾ ಚಿತ್ರವು ಆಕಾರ ತಳೆಯಲು ಆರಂಭಿಸಿ ಈಗ ಸ್ಪಷ್ಟವಾದ ಮೂರ್ತಿ ಮೂಡಿದೆ. ಕಂಭದಲ್ಲಿ ಮೂರ್ತಿಯಿರುವ ಹಿಂಭಾಗವು ಈಗಲೂ ಟೊಳ್ಳಾಗಿದ್ದು, ಬೆರಳಿನಿಂದ ತಟ್ಟಿದರೆ ಟೊಳ್ಳು ಶಬ್ದವು ಕೇಳುತ್ತದೆ. ಈ ಮೂರ್ತಿ ಈಗ ಕಂಬದ ಗಣಪತಿಯೆಂದು ಪ್ರಸಿದ್ಧವಾಗಿದೆ. ಈ ದೇವರಿಗೆ ಶಿವಪ್ಪನಾಯಕನ ಮಗಳು ಸಿದ್ದಮ್ಮಾಜಿಯು ದತ್ತಿಯನ್ನು ಕೊಟ್ಟಿರುವಳು.[7]

ಇಕ್ಕೇರಿಯ ದೊರೆಯಾಗಿದ್ದ ಮೊದಲನೆಯ ವೆಂಕಟಪ್ಪನಾಯಕನು ಈ ಆಚಾರ್ಯರನ್ನು ತನ್ನ ಅರಮನೆಗೆ ಬರಮಾಡಿಕೊಂಡು ಭಕ್ತಿಗೌರವಗಳಿಂದ ಸ್ವಾಗತಿಸಿ, ರಾಜಲಾಂಛನವಾದ ತನ್ನ ಪಸಿರು ನಿಶಾನೆಯನ್ನು ಸಮರ್ಪಿಸಿದ್ದನು. ಶಿಥಿಲವಾಗಿದ್ದ ಶೃಂಗೇರಿಯ ಮಠವನ್ನು ಪುನಃ ಭದ್ರಪಡಿಸಿ ಹೊಸ ವಿಸ್ತರಣವನ್ನೂ ೧೬೧೯ ರಲ್ಲಿ ಕಟ್ಟಿಸಿಕೊಟ್ಟನು.[8] ಒಂದು ಅಗ್ರಹಾರವನ್ನು ನಿರ್ಮಿಸಿ ಐವತ್ತು ಪಗೋಡಗಳಿಗಿಂತಲೂ ಹೆಚ್ಚು ಉತ್ಪನ್ನ ಬರುವ ಮುಕ್ಕಾರ್ನಾಡಿನಲ್ಲಿರುವ ಆಸ್ತಿಯನ್ನು ಗುರುಗಳಿಗೆ ಸಮರ್ಪಿಸಿದ್ದನು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದ ಶೃಂಗೇರಿ ಮಠದ ಭೂಮಿಯನ್ನೂ ಹಲವಾರು ಇನಾಂ ಗ್ರಾಮಗಳನ್ನೂ ಕಾರ್ಕಳದ ಭೈರರಸನೆಂಬ ಪಾಳೆಯಗಾರನು ತನ್ನ ವಶಪಡಿಸಿಕೊಂಡುಬಿಟ್ಟಿದ್ದನು. ಆದು ಶೃಂಗೇರಿ ಪೀಠಕ್ಕೆ ನಷ್ಟವಾಗಿದ್ದುದನ್ನು ಅರಿತ ವೆಂಕಟಪ್ಪ ನಾಯಕನು, ಕಾರ್ಕಳದ ಅರಸನೊಡನೆ ಯುದ್ಧಮಾಡಿ ಶೃಂಗೇರಿಯ ಆಸ್ತಿಯನ್ನು ಪುನಃ ಮಠಕ್ಕೆ ಕೊಡಿಸಿದ್ದನು.[9]

---

7. ಶೃ. ಶಾ 4–ದಾನ ಕೊಟ್ಟ ವರ್ಷ ೧೬೮೫ನೆಯ ಇಸವಿ.

8. ಶೃ.ಶಾ 5.

9. ಕೆ.ನೃ. ವಿ. ಪುಟ 85. ಶ್ರೀ ಕೆ. ಡಿ. ಸ್ವಾಮಿನಾಥನ್‌ರವರು ತಮ್ಮ NAYAKAS OF IKKERI ಎಂಬ ಪುಸ್ತಕದಲ್ಲಿ, ವೆಂಕಟಪ್ಪನಾಯಕನು ಭೈರರಸ ಒಡೆಯರ್ ಎಂಬಾತನನ್ನು ಯುದ್ಧದಲ್ಲಿ ಸೋಲಿಸಿದ್ದಾಗಿ ಬರೆದಿರುತ್ತಾರೆ. ಪುಟ 60.

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಗುರುಗಳವರು ತಮ್ಮ ನಂತರ ಪೀಠಾಧಿಕಾರಕ್ಕೆ ಯೋಗ್ಯನಾದ ಶಿಷ್ಯನಿಗಾಗಿ ಅನ್ವೇಷಣೆ ಮಾಡುತ್ತಿದ್ದರು. ಅನೇಕ ವಟುಗಳ ಜಾತಕಗಳನ್ನು ತರಿಸಿ ಪರಿಶೀಲಿಸುತ್ತಿದ್ದರು. ಅದೇ ಸಮಯಕ್ಕೆ ಸರಿಯಾಗಿ ಶೃಂಗೇರಿಗೆ ಆಗಮಿಸಿದ್ದ ಅಲಕಾದ್ರಿಯ ಪುತ್ರ ನರಸಿಂಹನತ್ತಲೂ ಅವರ ಗಮನ ಹರಿಯಿತು. ತಮ್ಮ ಆಸ್ಥಾನ ಪಂಡಿತರಾಗಿದ್ದ ವೆಂಕಟಾಚಲ ಯಜ್ವರು ನರಸಿಂಹನನ್ನು ಶೃಂಗೇರಿಗೆ ಕರೆಸಿರುವ ಕಾರಣವೂ ಗುರುಗಳಿಗೆ ತಿಳಿದಿತ್ತು. ಬಹ್ಮಚಾರೀ ನರಸಿಂಹನು ಪ್ರತಿದಿನವೂ ಗುರುಗಳ ದರ್ಶನಕ್ಕಾಗಿ ಬರುತ್ತಿದ್ದಾಗ, ಅವನ ಸ್ವಭಾವ ನಡತೆಗಳನ್ನು ಗುರುಗಳು ಸೂಕ್ಷ್ಮವಾಗಿ ಗಮನಿಸಿದ್ದರು. ನಯವಿನಯ ಸಂಪನ್ನನೂ ಸೌಜನ್ಯಶೀಲನೂ ಆಗಿದ್ದ ಬ್ರಹ್ಮಚಾರೀ ನರಸಿಂಹನಲ್ಲಿ ಗುರುಗಳಿಗೆ ವಿಶೇಷ ಅಭಿಮಾನವುಂಟಾಯಿತು.

ಆ ವರ್ಷದ ನವರಾತ್ರೀ ಉತ್ಸವದಲ್ಲಿ ನಡೆದ ಪಂಡಿತರ ಸಭೆಯಲ್ಲಿ ಭಾಗವಹಿಸಿದ್ದ ನರಸಿಂಹನು ಯಜುರ್ವೇದವನ್ನು ಪಾರಾಯಣ ಮಾಡಿದನು. ಕಂಚಿನಂತೆ ಸ್ಪಷ್ಟವೂ ರಮ್ಯವೂ ಆದ ಶಾರೀರದಲ್ಲಿ ನರಸಿಂಹನು ಹೇಳಿದ ಯಜುರ್ವೇದದ ಹನಸುಗಳು ವಿದ್ವಾಂಸರೆಲ್ಲರ ಗಮನವನ್ನೂ ಸೆಳೆದು ಅವನಿಗೆ ಮೆಚ್ಚುಗೆಯನ್ನು ತಂದುವು.

ಎಲ್ಲಕ್ಕಿಂತ ಹೆಚ್ಚಾಗಿ ಗುರುಗಳ ಮನಸ್ಸು ನರಸಿಂಹನಲ್ಲಿ ವಿಶೇಷವಾದ ಅಭಿಮಾನವನ್ನು ತಾಳಿತು. ಈ ಬ್ರಹ್ಮಚಾರಿಯ ಜೀವನದ ಗುರಿ ಕೇವಲ ಗಾರ್ಹಸ್ಥ್ಯವಲ್ಲ, ಅದಕ್ಕಿಂತಲೂ ಉನ್ನತವಾದುದು ಎನ್ನಿಸಿತು. ಈ ನರಸಿಂಹನೇ, ಬಹುದಿನಗಳಿಂದ ತಾವು ಅನ್ವೇಷಿಸುತ್ತಿದ್ದ ಶಿಷ್ಯನೆಂದು ಗುರುಗಳಿಗೆ ಮನವರಿಕೆಯಾಯಿತು. ಅವನಿಗೆ ಸನ್ಯಾಸದೀಕ್ಷೆಕೊಡುವ ನಿರ್ಧಾರ ಮಾಡಿದರು.

ಗುರುಗಳು ತಮ್ಮ ಆಂತರ್ಯವನ್ನು ವೆಂಕಟಾಚಲಯಜ್ವರಲ್ಲಿಯೂ, ಯಲ್ಲಾವಧಾನಿಯಲ್ಲೂ ವ್ಯಕ್ತಪಡಿಸಲು, ಅವರಿಬ್ಬರೂ ಕ್ಷಣಕಾಲ ದಿಗ್ಭ್ರಮೆಯಿಂದ ಅವಾಕ್ಕಾದರು. ಅನಂತರ ಸ್ವಲ್ಪ ಸಮಾಧಾನವನ್ನು ತಂದುಕೊಂಡ ಯಜ್ವರು, ನರಸಿಂಹನನ್ನು ಶೃಂಗೇರಿಗೆ ಕರೆಸಿಕೊಂಡ ಕಾರಣವನ್ನು ವಿವರಿಸಿ, ಅವನಿಗೆ ಗಾರ್ಹಸ್ಥ್ಯಧರ್ಮದ ಅಗ್ನಿಹೋತ್ರ ಮತ್ತು ಇತರ ಇಷ್ಟಿಗಳನ್ನು ಕಲಿಸುತ್ತಿರುವುದಾಗಿಯೂ, ವಿವಾಹವನ್ನು ಶೀಘ್ರ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾಗಿಯೇ ನಡೆಸಲು ಏರ್ಪಡಿಸಿರುವುದಾಗಿಯೂ ವಿಜ್ಞಾಪ್ತಿಮಾಡಿದರು. ಈ ವಿಷಯ ತಮ್ಮ ಬಂಧುಬಳಗಕ್ಕೆಲ್ಲಾ ತಿಳಿದಿರುವುದಾಗಿಯೂ ಹೇಳಿದರು. ಸ್ವಾಮಿಗಳ ಈ ಅಪೇಕ್ಷೆಯನ್ನು ತಮ್ಮಿಂದ ಈಡೇರಿಸಲು ಸಾಧ್ಯವಾಗದೆಂದೂ ತಿಳಿಸಿದರು. ಬ್ರಹ್ಮಚಾರಿಯೆ ಮಾತಾಪಿತರು ದೂರವಲ್ಲಿ ಇದ್ದು ಅವರೂ ಸಹ ಈ ಕೋರಿಕೆಗೆ ಸಮ್ಮತಿಯನ್ನು ನೀಡಲಾರರೆಂದೂ ಯಜ್ವರು ಸ್ಪಷ್ಟ ಪಡಿಸಿದರು.

ಆದರೆ ಅವರ ಮಾತು ಪ್ರಯೋಜನಕ್ಕೆ ಬರಲಿಲ್ಲ. ಗುರುಗಳ ನಿರ್ಧಾರ ಕದಲಲಿಲ್ಲ. ಅವರು ಸ್ವತಃ ನರಸಿಂಹನನ್ನೇ ಕೇಳೋಣವೆಂದು ಕರೆಕಳಿಸಿದರು. ನರಸಿಂಹನು ಗುರುಗಳ ಮಾತಿಗೆ ತಾನು ವಿವಾಹವಾಗಲೇಬೇಕೆಂದು ಹೇಳಲೇ ಇಲ್ಲ. ಆದರೆ ಜಗದ್ಗುರು ಪೀಠವನ್ನೇರುವಂತಹ ಯೋಗ್ಯತೆಯಾಗಲೀ ಅರ್ಹತೆಯಾಗಲಿ ತನ್ನಲ್ಲಿ ಇದೆಯೇ, ಎಂದು ಸಂಶಯವನ್ನು ಮಾತ್ರ ಗುರುಗಳಲ್ಲಿ ವ್ಯಕ್ತಪಡಿಸಿದ್ದನು. ನರಸಿಂಹನ ಜಾತಕವನ್ನು ಪರಿಶೀಲಿಸಿದ್ದ ಗುರುಗಳು ಅವನಿಗೆ ಸನ್ಯಾಸಯೋಗವಿರುವುದನ್ನು ಅರಿತುಕೊಂಡು, ಅವನನ್ನೇ ಶಿಷ್ಯನನ್ನಾಗಿ ಪರಿಗ್ರಹಿಸಲು ತೀರ್ಮಾನಿಸಿದರು. ನರಸಿಂಹನೂ ಸಹ ಶಾಂತನಾಗಿ ಸಮಾಧಾನಿಯಾಗಿ ತಾನು ಸನ್ಯಾಸ ಸ್ವೀಕರಿಸಲು ಸಿದ್ಧನಾಗಿರುವುದಾಗಿ ಸಮ್ಮತಿಯನ್ನು ನೀಡಿದನು.

ಶೀಘ್ರದಲ್ಲಿಯೇ ಸನ್ಯಾಸಾಶ್ರಮ ಪ್ರವೇಶದ ಸಿದ್ಧತೆಗಳೆಲ್ಲಾ ಮುಗಿದು, ಮಧುರೈ ಜಿಲ್ಲೆಯ ಶ್ರೀಕಂಠೇಶ್ವರಪುರದ ಅಲಕಾದ್ರಿಭಟ್ಟರ ಪುತ್ರ ಶ್ರೀ ನರಸಿಂಹಭಟ್ಟರು ತಮ್ಮ ಹದಿನಾರನೆಯ ವಯಸ್ಸಿನಲ್ಲಿ ಜಗದ್ಗುರು ಶ್ರೀ ಅಭಿನವ ನರಸಿಂಹಭಾರತೀ ಸ್ವಾಮಿಗಳವರಿಂದ ಸನ್ಯಾಸಾಶ್ರಮವನ್ನು ಸ್ವೀಕರಿಸಿ ಶ್ರೀ ಸಚ್ಚಿದಾನಂದಭಾರತೀ ಎಂಬ ಅಭಿದಾನದಿಂದ ೧೨-೯-೧೬೨೨ ರಲ್ಲಿ ಜಗದ್ಗುರು ಪೀಠಾರೋಹಣ ಮಾಡಿದರು.

ಆ ಸಮಯದಲ್ಲಿ ಇನ್ನೂ ತಿರುಚಿರಾಪಳ್ಳಿಯಲ್ಲಿಯೇ ಇದ್ದ ಅಲಕಾದ್ರಿ ಭಟ್ಟರಿಗೆ ಈ ಸುದ್ದಿ ತಿಳಿದಾಗ ಆದ ದುಃಖ, ಕೋಪ, ಉದ್ವೇಗಗಳು ಅಷ್ಟಿಷ್ಟಲ್ಲ. ಇವರಲ್ಲಿ ವೆಂಕಟಾಚಲ ಯಜ್ವರ ಪಿತೂರಿಯೂ ಇದೆಯೆಂದು ಭಾವಿಸಿ, ಕೋಪಾವಿಷ್ಟರಾಗಿಯೇ ಶೃಂಗೇರಿಗೆ ಬಂದ ಅಲಕಾದ್ರಿಭಟ್ಟರು ಅಲ್ಲಿಯ ವಿದ್ವಮ್ಮಾನ್ಯರುಗಳನ್ನೆಲ್ಲಾ ಅವೈಯುಕ್ತಿಕವಾಗಿಯೂ ಇತರರಿಂದಲೂ ಅರಿತ

SriVidyabharathi Book Centre, Sringeri

CC-O. In Public Domain. Digitized by eGangotri

ಮೇಲೆ ಕ್ರಮೇಣ ಸಮಾಧಾನಚಿತ್ತರಾದರು, ಆ ಬಳಿಕ ಶೃಂಗೇರಿಯಲ್ಲಿಯೇ ನೆಲಸಿದರು.

೫

ಶ್ರೀ ಸಚ್ಚಿದಾನಂದ ಭಾರತಿಯವರು ಸನ್ಯಾಸಸ್ವೀಕರಿಸಿ ಜಗದ್ಗುರುಗಳ ಶಿಷ್ಯರಾಗಿ ಪೀಠಕ್ಕೆ ದಯಮಾಡಿಸಿದಾಗ, ಇಕ್ಕೇರಿಯ ದೊರೆ, ಮೊದಲನೆಯ ವೆಂಕಟಪ್ಪನಾಯಕನು ತನ್ನ ಭಕ್ತಿಗೌರವಗಳ ದ್ಯೋತಕವಾಗಿ ಅನೇಕ ಬಿಲ್ಲತ್ತುಗಳನ್ನು ಗುರುಗಳಿಬ್ಬರಿಗೂ ಕಳಿಸಿದ್ದನು. ತನ್ನ ದೂತರ ಮೂಲಕ ರಾಯಸವನ್ನು ಕಳುಹಿಸಿ, ಗುರುದ್ವಯರು ಇಕ್ಕೇರಿಗೆ ದಯಮಾಡಿಸಿ ತನ್ನನ್ನು ಆಶೀರ್ವದಿಸಬೇಕೆಂದು ಪ್ರಾರ್ಥಿಸಿಕೊಂಡಿದ್ದನು.

ಆ ವರ್ಷದ ನವರಾತ್ರಿಯ ಉತ್ಸವದ ನಂತರ ಗುರು ಶಿಷ್ಯರಿಬ್ಬರೂ ತಮ್ಮ ಪರಿವಾರದೊಡನೆ ಇಕ್ಕೇರಿಗೆ ದಯಮಾಡಿಸಿದರು. ದೊರೆಯು ಸ್ವತಃ ನಗರದ ಮಹಾದ್ವಾರದಲ್ಲಿ ಗುರುಗಳನ್ನು ಇದಿರ್ಗೊಂಡು, ಉತ್ಸವದಲ್ಲಿ ಅರಮನೆಗೆ ಬಿಜಮಾಡಿಸಿ ಬಿಲ್ಲತ್ತುಗಳನ್ನು ಕಾಣಿಕೆಯನ್ನೂ ಅರ್ಪಿಸಿದನು.

ಸ್ವತಃ ಪಂಡಿತನಾಗಿದ್ದ ವೆಂಕಟಪ್ಪನಾಯಕನು ತರ್ಕ, ಮೀಮಾಂಸ, ನ್ಯಾಯಶಾಸ್ತ್ರಗಳಲ್ಲಿ ಚಿಕ್ಕಸ್ವಾಮಿಗಳು ಅತ್ಯಲ್ಪಕಾಲದಲ್ಲಿಯೇ ಗಳಿಸಿದ್ದ ವಿದ್ವತ್ತನ್ನು ಬಹುವಾಗಿ ಮೆಚ್ಚಿಕೊಂಡು ಶ್ಲಾಘಿಸಿದನು. ಹಿರಿಯ ಗುರುಗಳು ಪ್ರತಿದಿನವೂ ಅರಮನೆಗೆ ದಯಮಾಡಿಸಿ, ಅರಮನೆಯಲ್ಲಿ ಸೇರುತ್ತಿದ್ದ ವಿದ್ವಾಸರಿಗೆ ತಾವೇ ರಚಿಸಿದ್ದ ಶಿವಗೀತಾ ಸಂಸ್ಕೃತ ವಾಖ್ಯಾನವನ್ನು ವಿವರಿಸುತ್ತಿದ್ದರು.

ಇಕ್ಕೇರಿಯಲ್ಲಿ ಸ್ವಲ್ಪದಿನಗಳ ಕಾಲ ರಾಜನ ಇಚ್ಛೆಯಂತೆ ಬಿಡಾರ ಮಾಡಿದ್ದ ಯತಿದ್ವಯರು ರಾಜನನ್ನೂ ರಾಜಮನೆತನದವರನ್ನೂ ಹರಸಿ, ಶೃಂಗೇರಿಗೆ ಹಿಂದಿರುಗಿದರು.

ಹಿರಿಯಗುರುಗಳಾದ ಶ್ರೀಅಭಿನವ ನರಸಿಂಹಭಾರತೀಸ್ವಾಮಿಗಳು ೧೬೨೨ ರಲ್ಲಿ ವಿದೇಹಮುಕ್ತಿಯನ್ನು ಪಡೆದರು. ಬಾಲಗುರುಗಳು ತಮ್ಮ ಗುರುವರ್ಯರ ಆರಾಧನಾದಿ ಕಾರ್ಯಗಳನ್ನು ಭಕ್ತಿ ಶ್ರದ್ಧೆಯಿಂದ ನೆರವೇರಿಸಿದರು.

ಅನಂತರ ಪರಮಾಚಾರ್ಯರು ಪೀಠದ ಮೂರನೆಯ ಜಗದ್ಗುರುಗಳಾಗಿ,

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀಶ್ರೀ ಸಚ್ಚಿದಾನಂದ ಭಾರತೀಸ್ವಾಮಿಗಳವರಿಗೆ ೧೬೨೩ ರಲ್ಲಿ ಪಟ್ಟಾಭಿಷೇಕವಾಯಿತು. ಹಿಂದಿನ ಸಮಾರಂಭಕ್ಕೆ-ಶಿಷ್ಯಸ್ವೀಕಾರಕ್ಕೆ-ಕಳಿಸಿದ್ದಂತೆಯೇ ಈ ಸಮಾರಂಭಕ್ಕೂ ದೊರೆ ವೆಂಕಟಪ್ಪನಾಯಕನು ಖಿಲ್ಲತ್ತುಗಳನ್ನು ತನ್ನ ಪ್ರತಿನಿಧಿಯಾಗಿದ್ದ ಗೋಪಾಲ ಭಟ್ಟರೆಂಬುವರ ಮೂಲಕ ಕಳುಹಿಸಿದ್ದನು.

ಪುತ್ರಶೋಕದಿಂದ ದುಃಖಿತನಾಗಿದ್ದ ದೊರೆ ವೆಂಕಪ್ಪನಾಯಕನ ಮಗ ಭದ್ರಪ್ಪನಾಯಕನು ತನ್ನ ತಾರುಣ್ಯದಲ್ಲಿಯೇ ತೀರಿಕೊಂದ್ದನು. ವೃದ್ಧದೊರೆ ವೆಂಕಟಪ್ಪನಾಯಕ ನನ್ನು ಕಂಡುಬರಲು, ತಾವೇ ಇಕ್ಕೇರಿಗೆ ಹೋಗಿ ಅನುತಾಪ ಸೂಚಿಸಿ ಬರಬೇಕೆಂದು ಆಲೋಚಿಸಿದ ಗುರು ಶ್ರೀ ಸಚ್ಚಿದಾನಂದ ಭಾರತೀ ಸ್ವಾಮಿಗಳು, ತಮ್ಮ ಮಿತಪರಿವಾರದೊಡನೆ ಸಂಚಾರವನ್ನು ಆರಂಭಿಸಿದರು. ಅಲ್ಲಲ್ಲಿ ಬಿಡಾರಮಾಡುತ್ತ ಇಕ್ಕೇರಿಗೆ ಬಂದ ಸ್ವಾಮಿಗಳನ್ನು ನಗರದ ಮಹಾದ್ವಾರದಲ್ಲಿ ಸ್ವಾಗತಿಸಿದ ನಾಗರಿಕರು ಮತ್ತು ಸರ್ಕಾರದ ಅಧಿಕಾರಿಗಳು ಅವರನ್ನು ಮೆರವಣಿಗೆಯಲ್ಲಿ ಅಘೋರೇಶ್ವರ ದೇವಾಲಯಕ್ಕೆ ಬಿಜಮಾಡಿಸಿದರು.

ಅಲ್ಲಿ ಶ್ರೀ ಅಘೋರೇಶ್ವರ ಸ್ವಾಮಿಯವರಿಗೂ ಶ್ರಿ ಅಖಿಲಾಂಡೇಶ್ವರೀ ಅಮ್ಮನವರಿಗೂ ಅರ್ಚನೆಯನ್ನು ನೆರವೇರಿಸಿದನಂತರ, ಗುರುಗಳವರು, ಅರಮನೆಗೆ ತೆರಳಿ, ರಾಜನನ್ನು ಆಶೀರ್ವದಿಸಿ, ಕುಶಲ ಸಂಭಾಷಣೆ ನಡೆಸಿ, ದೊರೆಯು ಕಟ್ಟಿಸಿದ್ದ, ಶೃಂಗೇರೀ ಮಠಕ್ಕೆ ದಯಮಾಡಿಸಿದರು.

ಇಕ್ಕೇರಿಯಲ್ಲಿ ಎರಡುವಾರಗಳ ಕಾಲ ಬಿಡಾರಮಾಡಿದ್ದ ಗುರುಗಳು, ರಾಜರಲ್ಲಿ ತಾವು ಕೊಲ್ಲೂರಿಗೆ ಶ್ರೀ ಮೂಕಾಂಬಿಕೆಯ ದರ್ಶನಕ್ಕೆ ಹೋಗಬೇಕೆಂಬ ಅಪೇಕ್ಷೆಯನ್ನು ವ್ಯಕ್ತಪಡಿಸಿದರು. ದೊರೆ ವೆಂಕಟಪ್ಪನಾಯಕನು ಗುರುಗಳೊಡನೆ ತಾನೂ ದೇವರ ದರ್ಶನಕ್ಕೆ ಹೊರಡಲು ಇಚ್ಛಿಸಿ ಅದಕ್ಕೆ ಅಗತ್ಯವಾದ ಏರ್ಪಾಡುಗಳನ್ನು ಮಾಡಿಸಿದನು. ಗುರುಗಳ ಈ ತೀರ್ಥಯಾತ್ರೆಯಲ್ಲಿ ಜೊತೆಯಲ್ಲಿಯೇ ಇದ್ದ ವೆಂಕಟಪ್ಪನಾಯಕನು, ಅವರು ಕ್ಷೇಮವಾಗಿ ಶೃಂಗೇರಿಗೆ ತಲುಪಲು ಅಗತ್ಯವಾಗಿದ್ದ ಏರ್ಪಾಟುಗಳನ್ನು ಮಾಡಿಸಿ, ಮುಂದೆ ತಾನು ಜೈತ್ರಯಾತ್ರೆಗಾಗಿ ಸೈನ್ಯಸಮೇತ ಹೊರಟನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಗುರುಗಳವರು ಇಕ್ಕೇರಿಯಲ್ಲಿದ್ದಾಗ, ಆರಮನೆಯಲ್ಲಿ ಅವರ ನೇತೃತ್ವದಲ್ಲಿ ಪ್ರತಿದಿನವೂ ವಿದ್ವತ್ಸಭೆ ನಡೆಯುತ್ತಿತ್ತು. ಬಹುಜನ ಪಂಡಿತರು ಸಭೆಯಲ್ಲಿ ಭಾಗವಹಿಸುತ್ತಿದ್ದು, ಗುರುಗಳು ಅವರಿಗೆಲ್ಲಾ ಮಾರ್ಗದರ್ಶನ ನೀಡುತ್ತಿದ್ದರು. ಆ ವಿದ್ವತ್ಸಭೆಯಲ್ಲಿ ಭಾಗವಹಿಸಲು ಶ್ರೀ ಅಪ್ಪಯ್ಯ ದೀಕ್ಷಿತರ ಶಿಷ್ಯರಾಗಿದ್ದ ರಂಗೋಜಿದೀಕ್ಷಿತ ಮತ್ತು ಭಟ್ಟೋಜಿದೀಕ್ಷಿತ ಎಂಬ ವಿದ್ವಾಂಸರು ಕಾಶಿಯ ಯಾತ್ರೆಯನ್ನು ಮುಗಿಸಿಕೊಂಡು ಆಗತಾನೇ ಬಂದಿದ್ದರು.

ರಂಗೋಜೀದೀಕ್ಷಿತರು ವಿದ್ಯಾಧೀಶ ಭಟ್ಟರೆಂಬ ಪಂಡಿತರನ್ನೂ, ಭಟ್ಟೋಜಿದೀಕ್ಷಿತರು ರಾಮಾನುಜಾಚಾರ್ಯರೆಂಬ ವಿದ್ವಾಂಸರನ್ನೂ ವಾಕ್ಯಾರ್ಥದಲ್ಲಿ ಸೋಲಿಸಿದ್ದರು. ಭಟ್ಟೋಜಿದೀಕ್ಷಿತರು ರಾಜನ ಪ್ರೋತ್ಸಾಹದಿಂದ ತತ್ವಕೌಸ್ತುಭವೆಂಬ ಗ್ರಂಥವನ್ನು ರಚಿಸಿ ಪುರಸ್ಕೃತರಾದರು[10]. ಈ ವಿದ್ವತ್ಸಭೆಯಲ್ಲಿಯೇ ಶ್ರೀ ಸಚ್ಚಿದಾನಂದ ಭಾರತೀಸ್ವಾಮಿಗಳವರು ಇಕ್ಕೇರಿಯ ಅರಸ ಮೊದಲನೆಯ ವೆಂಕಟಪ್ಪನಾಯಕನಿಗೆ "ವೈದಿಕ ಅಪ್ಪೈತಸಿದ್ಧಾಂತ ಪ್ರತಿಷ್ಠಾಪಕ" ಎಂಬ ಬಿರುದನ್ನು ಇತ್ತು ಗೌರವಿಸಿದರು. ಈ ಬಿರುದನ್ನು ಇಕ್ಕೇರಿಯ ಮುಂದಿನ ದೊರೆಗಳೂ ಅತ್ಯಂತ ಹೆಮ್ಮೆಯಿಂದ ಧರಿಸಿಕೊಳ್ಳುತ್ತಿದ್ದರು.

ಈ ದೊರೆಯು ವಿದ್ವಾಂಸರಿಗೆ ಆಶ್ರಯದಾತನಾಗಿದ್ದನು. ಈತನ ಪ್ರೋತ್ಸಾಹದಿಂದ ಕವಿ ತಿರುಮಲಭಟ್ಟನು ವಾರ್ಧಕಷಟ್ಪದಿಯಲ್ಲಿ ಶಿವಗೀತಾವ್ಯಾಖ್ಯಾನವನ್ನೂ, ಸಂಸ್ಕೃತದಲ್ಲಿ ಶಿವಾಷ್ಟಪದಿಯನ್ನೂ, ರಂಗನಾಥ ದೀಕ್ಷಿತನು ತಂತ್ರಸಾರವ್ಯಾಖ್ಯಾನವನ್ನೂ ರಚಿಸಿದ್ದರು. ಅಪ್ಪಪಂಡಿತನೆಂಬಾತನು ಮಾನಸಾರವೆಂಬ ಅಪ್ಪಶಾಸ್ತ್ರವನ್ನು ರಚಿಸಿದ್ದನು.

೬

೧೬೨೯ ರಲ್ಲಿ ಮೊದಲನೆ ವೆಂಕಟಪ್ಪನಾಯಕನ ನಿಧನಾನಂತರ ಅವನ ಮಗನಮಗ* ಇಪ್ಪತ್ತುವರ್ಷದ ತರುಣ, ವೀರಭದ್ರನಾಯಕನು ಇಕ್ಕೇರಿ

10. TTW P 48

*ವೆಂಕಟಪ್ಪನಾಯಕನ ಮಗ ಭದ್ರಪ್ಪನಾಯಕನು ತನ್ನ ತಾರುಣ್ಯದಲ್ಲಿಯೇ ತೀರಿಕೊಂಡಿದ್ದನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಯಲ್ಲಿ ರಾಜ್ಯಾಭಿಷಿಕ್ತನಾದನು. ಅಲ್ಲಿಯವರೆಗೆ ಹೆದರಿ ಮುದುರಿಕೊಂಡಿದ್ದ ಪುಂಡುಪಾಳೆಯಗಾರರು, ವೆಂಕಟಪ್ಪನ ನಿಧನಾನಂತರ ಇಕ್ಕೇರಿಯ ವಿರುದ್ಧ ಕತ್ತಿಮಸೆಯಲು ಪ್ರಾರಂಭಿಸಿದರು.

ಕಳಸದ ಪಾಳೆಯಗಾರ ಭೈರವನಾಯಕನು ಅಂಥವರಲ್ಲಿ ಮೊದಲಿಗನಾಗಿದ್ದನು. ವೀರಭದ್ರನು ಇನ್ನೂ ಪ್ರಬುದ್ಧನಾನಕ್ಕೆ ಬರದ, ಅನುಭವ ವಿರದ ಯುವಕ ದೊರೆಯಾಗಿದ್ದುದರಿಂದ, ಭೈರವನು ತನ್ನ ಸೈನ್ಯವನ್ನು ಸಜ್ಜುಗೊಡಿಸಿ, ಇಕ್ಕೇರಿಗೆ ಸೇರಿದ ಬಹುಭಾಗವನ್ನೂ ಶೃಂಗೇರಿಯ ಜಹಗೀರಿಯನ್ನೂ ವಶಮಾಡಿಕೊಂಡುಬಿಟ್ಟನು.

ಶೃಂಗೇರಿ ಮಠದ ಐಶ್ವರ್ಯವನ್ನು ಕೊಳ್ಳೆಹೊಡೆಯುವ ಉದ್ದೇಶವನ್ನು ಹೊಂದಿ, ಅದನ್ನು ತೋರಗೊಡದೆ, ಮಠದ ಕಾರ್ಯಕರ್ತರಿಗೆ ಗೌರವ ಪೂರ್ವಕವಾದ ಪತ್ರವನ್ನು ಬರೆದು, ಶ್ರೀ ಸ್ವಾಮಿಗಳು ಕಳಸಕ್ಕೆ ದಯಮಾಡಿಸಬೇಕೆಂದೂ ತನ್ನನ್ನು ಆಶೀರ್ವದಿಸಬೇಕೆಂದೂ ಭೈರವನು ಕೇಳಿಕೊಂಡಿದ್ದನು.

ವಿಜಯನಗರದ ರಕ್ಷಣೆಯಲ್ಲಿಯೂ, ಅನಂತರ ಇಕ್ಕೇರಿಯ ನಾಯಕರ ರಕ್ಷಣೆಯಲ್ಲಿಯೂ ಇದ್ದ ಶೃಂಗೇರಿಯು, ತನ್ನ ಆಸ್ತಿಪಾಸ್ತಿಗಳ, ಜವಿಾನು ಜಹಗೀರಿಗಳ ರಕ್ಷಣೆಗಾಗಿ ಸ್ವಂತವಾದ ಏರ್ಪಾಡನ್ನೇನೂ ಮಾಡಿಕೊಂಡಿರಲಿಲ್ಲ. ಆಪಾಯ ಬಂದಾಗಲೆಲ್ಲಾ ಯಾರಾದರೂ ರಾಜರೇ ರಕ್ಷಣೆಗೆ ಧಾವಿಸಿ ಬರಬೇಕಾಗಿತ್ತು. ಅಲ್ಲಿಯವರೆವಿಗೂ ಅಂತಹ ದೊಡ್ಡ ತೊಂದರೆ ಯಾವುದೂ ಸಂಭವಿಸಿಯೂ ಇರಲಿಲ್ಲ. ಈಗ ಇಕ್ಕೇರಿಯ ಅರಸರ ರಕ್ಷಣೆ ತಪ್ಪಿಹೋಗಿ ಭೈರವನ ಮುಷ್ಟಿಯಲ್ಲಿ ಸಿಕ್ಕಿದ್ದ ಶೃಂಗೇರಿಗೆ ಅವನಿಂದ ಎಂತಹ ಆಪಾಯವಾದರೂ ಆಗಬಹುದಿತ್ತು.

ಶತ್ರುವಾದ ಭೈರವನಿಂದ ಆಹ್ವಾನ ಪತ್ರ ಬಂದಾಗ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮಿಗಳವರು ಆಲೋಚನೆ ಮಾಡಿ, ಮಠದ ಮತ್ತು ಜಹಗೀರಿಯ ನಾಗರಿಕರ ಹಿತದ ದೃಷ್ಟಿಯಿಂದ ತಾವು ಅವನ ಆಹ್ವಾನವನ್ನು ಮನ್ನಿಸಿ ಕಳಸಕ್ಕೆ ಹೋಗುವುದೇ ಲೇಸೆಂದು ನಿರ್ಧರಿಸಿದರು. ಹೋಗದಿದ್ದಲ್ಲಿ, ಅದೇ ನೆಪವಾಗಿ ಭೈರವನು ಶೃಂಗೇರಿಯನ್ನು ಕೊಳ್ಳೆ ಹೊಡೆಯಬಹುದೆಂಬ ಭಯವಿತ್ತು. ಕೆಲವರು ಗುರುಗಳ ನಿರ್ಣಯವನ್ನು ಒಪ್ಪದಿದ್ದರೂ, ಗುರು

Sri Vidyabharathi Book Centre, Shringeri

CC-O. In Public Domain. Digitized by eGangotri

ಗಳು ಧೈರ್ಯಮಾಡಿ ಭೈರವನ ರಾಜಧಾನಿಯಾದ ಕಳಸಕ್ಕೆ ಹೊರಟೇ ಬಿಟ್ಟರು.

ಶ್ರೀ ಗುರುಗಳು ಕಳಸವನ್ನು ಸಮೀಪಿಸುತ್ತಿದ್ದಾಗ, ಭೈರವನೇ ಸ್ವತಃ ಊರಿನ ಹೆಬ್ಬಾಗಿಲಿಗೆ ಬಂದು ರಾಜಮರ್ಯಾದೆಯಿಂದ ಅವರನ್ನು ಸ್ವಾಗತಿಸಿ ಶ್ರೀ ಕಳಸೇಶ್ವರನ ದೇವಾಲಯಕ್ಕೆ ಅವರನ್ನು ಬಿಜಮಾಡಿಸಿದನು. ದೇವಾಲಯದಲ್ಲಿ ಅರ್ಚನಾದಿಗಳು ನೆರವೇರಿದ ನಂತರ ದೊಡ್ಡ ಸಭೆಯನ್ನು ಉದ್ದೇಶಿಸಿ ಗುರುಗಳು ಉಪನ್ಯಾಸವನ್ನು ಮಾಡಿದರು. ಆ ಉಪನ್ಯಾಸದಲ್ಲಿ ಒಳ್ಳೆಯ ರಾಜನ ಲಕ್ಷಣಗಳನ್ನು ವಿವರಿಸಿ ಇಕ್ಕೇರಿಯ ವೀರಭದ್ರ ನಾಯಕನನ್ನು ಉದಹರಿಸಿದರು. ಭೈರವನೂ ಅಂತಹ ಒಳ್ಳೆಯ ದೊರೆ ಆಗಬೇಕೆಂದು ಆಶೀರ್ವದಿಸಿದರು.

ಈ ಭಾಷಣವು ತನ್ನಲ್ಲಿ ಪರಿಣಾಮ ಉಂಟಾದಂತೆ ಭೈರವನು ನಟನೆ ಮಾಡಿದನು.

ಮಠದ ಐಶ್ವರ್ಯದ ಮೇಲೆ ಕಣ್ಣಿಟ್ಟಿದ್ದ ಭೈರವನು ಆ ಸಮಯದಲ್ಲಿ ಸ್ವಾಮಿಗಳನ್ನು ಹಣ ಕೇಳಲು ಹಿಂಜರಿದನು. ಆದರೆ ತನ್ನ ಶಕ್ತಿ ಸಾಮರ್ಥ್ಯಗಳನ್ನು ಸ್ವಾಮಿಗಳಿದುರಿಗೆ ಪ್ರದರ್ಶನ ಮಾಡಲು ಉದ್ದೇಶಿಸಿ, ತನ್ನ ಎಲ್ಲಾ ಸೈನ್ಯವನ್ನೂ ಜಮಾವಣೆ ಮಾಡಿಸಿ ದೊಡ್ಡದಾದ ಕವಾಯತ್ತನ್ನು ಏರ್ಪಡಿಸಿದನು. ಸೈನ್ಯವೆಲ್ಲವೂ ಸ್ವಾಮಿಗಳಿಗೆ ಗೌರವ ರಕ್ಷೆ ನೀಡಿತು. ಈ ಪ್ರದರ್ಶನದ ಉದ್ದೇಶವು ಸ್ವಾಮಿಗಳಿಗೆ ಅರ್ಥವಾಯಿತು. ಆದರೆ ಅವರು ಅದನ್ನು ತೋರ್ಗೊಡಲಿಲ್ಲ.

ಸುಮಾರು ಒಂದು ತಿಂಗಳ ಕಾಲ ಕಳಸದಲ್ಲಿ ಇದ್ದ ಗುರುಗಳು, ನಿತ್ಯವೂ ನದಿಯಲ್ಲಿ ಸ್ನಾನಮಾಡಿ ಕಳಸೇಶ್ವರನಿಗೆ ಅರ್ಚನಾದಿಗಳನ್ನು ಮಾಡುತ್ತ ಭಕ್ತರಿಗೂ ಶಿಷ್ಯರಿಗೂ ತೀರ್ಥಪ್ರಸಾದ ವಿನಿಯೋಗ ಮಾಡುತ್ತಿದ್ದರು. ವಿದ್ವಾಂಸರಲ್ಲಿ ಶಾಸ್ತ್ರಾರ್ಥ ವಿಚಾರ ಮಾಡುತ್ತಿದ್ದರು. ಆರ್ಹರೂ ಅವಶ್ಯಕತೆಯುಳ್ಳವರೂ ಆದವರಿಗೆ ಉಪದೇಶ ಬೋಧನೆಗಳನ್ನೂ ಮಾಡುತ್ತಿದ್ದರು. ಸ್ವಲ್ಪ ದಿನಗಳನ್ನು ಹೀಗೆ ಕಳೆದ ನಂತರ ಭೈರವನಿಂದ ಬೀಳ್ಕೊಡಲ್ಪಟ್ಟು ಶೃಂಗೇರಿಗೆ ಹಿಂದಿರುಗಿದರು.

ಇಂದಿನಂತೆ ಸಾಧನಗಳಾಗಲೀ ಸಹಿತೆಗಳಾಗಲೀ ದೂರವಾಣಿ, ತಂತಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಮಾಚಾರ ವ್ಯವಸ್ಥೆ ಇಲ್ಲದಿದ್ದ ಆ ಕಾಲದಲ್ಲಿ ಒಂದೂರಿನಿಂದ ಇನ್ನೊಂದೂರಿಗೆ ಸುದ್ದಿ ಮುಟ್ಟಬೇಕಾದರೆ, ಯಾರಾದರೂ ಪ್ರಯಾಣ ಮಾಡುವವರಿಂದ ಬರಬೇಕಾಗಿತ್ತು. ಶ್ರೀ ಸ್ವಾಮಿಗಳವರು ಶೃಂಗೇರಿಯನ್ನು ಬಿಟ್ಟು ಒಂದು ತಿಂಗಳವರೆಗೂ ಹಿಂದಿರುಗದಿದ್ದುದು, ಅವರ ಮಾತಾಪಿತರಿಗೂ, ಮಠದ ಅಧಿಕಾರ ವರ್ಗಕ್ಕೂ ಪ್ರಜಾಸಮುದಾಯಕ್ಕೂ ಭಯ ಮತ್ತು ಚಿಂತೆಗೆ ಕಾರಣವಾಗಿತ್ತು. ಇನ್ನೂ ತರುಣರಾಗಿದ್ದ ಸ್ವಾಮಿಗಳು ಸರಿಯಾದ ಆಲೋಚನೆಯನ್ನು ಮಾಡದೆ ಶತ್ರುವಿನ ರಾಜಧಾನಿಯನ್ನು ಹೊಕ್ಕರಲ್ಲಾ ಎಂದು ಜನ ಭೀತರಾಗಿದ್ದರು. ಯಾವ ಅಪಾಯವೂ ಇಲ್ಲದೆ, ಪ್ರಸನ್ನ ಮುಖದಿಂದ ಊರಿಗೆ ಹಿಂದಿರುಗಿದ ಗುರುಗಳನ್ನು ದರ್ಶನ ಮಾಡಿದಾಗ, ಅವರ ಭೀತಿಯೆಲ್ಲಾ ಮಾಯವಾಗಿ ಹರ್ಷ ಮೂಡಿತು.

ಆದರೆ ಶೃಂಗೇರಿಯ ಜನಕ್ಕೆ ಭೈರವನ ಭೀತಿ ತಪ್ಪಲಿಲ್ಲ. ಅವನ ಹೊರಗಣ ನಡೆನುಡಿಗಳು ಸಭ್ಯತೆಯನ್ನು ತೋರಿದ್ದರೂ, ಆಂತರ್ಯವು ಅಸಾಧುವಾಗಿದ್ದುದರಿಂದ, ಎಂದಾದರೂ ಅವನಿಂದ ಶೃಂಗೇರಿಯ ಮಠಕ್ಕೆ ಅಪಾಯವಿದ್ದೇ ಇತ್ತು. ಇದನ್ನು ಅರಿತ ಹಲವಾರು ಜನ ವ್ಯಾಪಾರಿಗಳೂ ಧನಿಕರೂ ಊರು ಬಿಟ್ಟು ಹೋಗುವುದೇ ಕ್ಷೇಮಕರವೆಂದು ಭಾವಿಸಿದರು.

ಅದೇ ಸಮಯದಲ್ಲಿ ಜ್ಞಾನೇಂದ್ರ ಭಟ್ಟನೆಂಬ ಮಠದ ಖಜಾನೆಯ ಅಧಿಕಾರಿಯೊಬ್ಬನು, ಭೈರವನನ್ನು ಸಂಧಿಸಿ, ತಾನು ಐದುನೂರು ಚಿನ್ನದ ವರಹಗಳನ್ನು ತಂದೊಪ್ಪಿಸುವುದಾಗಿಯೂ, ಭೈರವನು ಶೃಂಗೇರಿಯ ತಂಟೆಗೆ ಬರಬಾರದೆಂದೂ ಅವನನ್ನು ಒಪ್ಪಿಸಿದ್ದನು. ಮಠದ ನೌಕರನಾಗಿದ್ದ ಆತನು ಸ್ವಾಮಿಗಳನ್ನು ಕೇಳದೇನೇ ತಾನೇ ಸ್ವತಃ ಈ ಒಪ್ಪಂದವನ್ನು ಮಾಡಿಕೊಂಡಿದ್ದನು.

ಮಠದ ಐಶ್ವರ್ಯದ ಮೇಲೆ ಮೊದಲೇ ಕಣ್ಣಿಟ್ಟಿದ್ದ ಭೈರವನು ಹಣದ ಆಸೆಗಾಗಿ ಪದೇ ಪದೇ ಬಂದು ಇದೇ ರೀತಿಯಲ್ಲಿ ಕಾಡಬಹುದೆಂದು ಸ್ವಾಮಿಗಳಿಗೆ ಅನ್ನಿಸಿತು. ಯಾರಲ್ಲಿಯೂ ಪರ್ಯಾಲೋಚನೆ ಮಾಡದೆ ತೆಗೆದುಕೊಂಡ ಭಟ್ಟನ ಈ ತೀರ್ಮಾನದಿಂದ ಸ್ವಾಮಿಗಳಿಗೆ ಅಸಮಾಧಾನವಾದರೂ, ಭೈರವನ ಅಪಾಯ ತಪ್ಪಬಹುದೆಂದೆಣಿಸಿ, ಅದಕ್ಕೆ ಸಮ್ಮತಿಯಿತ್ತರು. ಹಣವನ್ನು ಕಷ್ಟದಿಂದ ಸಂಗ್ರಹಿಸಬೇಕಾಯಿತು. ಆ ಹಣವನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಪಡೆಯಲು ಭೈರವನೇ ಸ್ವತಃ ಶೃಂಗೇರಿಗೆ ಬಂದನು. ಶೃಂಗೇರಿಯಲ್ಲಿ ಒಂದೆರಡು ದಿನಗಳಿದ್ದು ಅಲ್ಲಿಯ ವೈಭವವನ್ನು ಸ್ವತಃ ನೋಡಿದನು. ಶ್ರೀ ಶಾರದಾ ಶ್ರೀ ಗುರುಗಳ ದರ್ಶನ ಮಾಡಿಕೊಂಡು ಹಣದೊಡನೆ ಕಳಸಕ್ಕೆ ಹಿಂದಿರುಗಿದನು.

ಭೈರವನು ಕಾರ್ಕಳದಲ್ಲಿ ತನ್ನ ಅನುಚರರೊಡನೆ ಸುತ್ತುತ್ತಿದ್ದಾಗ, ವೀರಭದ್ರ ನಾಯಕನು ಅವನಿಂದ ಕಸಿಯಲ್ಪಟ್ಟಿದ್ದ ತನ್ನ ಭೂಭಾಗವನ್ನು ಮರಳಿ ಪಡೆಯಲು ಪ್ರಯತ್ನಿಸಿದನು. ಅವನ ಯತ್ನ ವಿಫಲವಾಯಿತು. ಆದರೂ ವೀರಭದ್ರನಾಯಕನು ಹಿಂದೆಗೆಯದೆ ಪುನಃ ಪುನಃ ಪ್ರಯತ್ನಿಸಿದನು. ಭೈರವನ ಸೈನ್ಯವನ್ನು ಪರಾಕ್ರಮದಿಂದ ಎದುರಿಸಿ ಯುದ್ಧದಲ್ಲಿ ಕೊನೆಗೆ ವೀರಭದ್ರನೇ ಜಯಶಾಲಿಯಾದನು.

ವೀರಭದ್ರನು ಹೀಗೆ ಭೈರವನೊಡನೆ ಯುದ್ಧದಲ್ಲಿ ಮಗ್ನನಾಗಿದ್ದಾಗ ಅವನ ದಾಯಾದಿಯಾಗಿದ್ದ ವೀರಪೊಡೆಯನು ಹಲವು ಜನ ಕುಹಕಿಗಳ ಸಹಾಯದಿಂದ, ಇಕ್ಕೇರಿಯ ಸಿಂಹಾಸನವನ್ನು ಆಕ್ರಮಿಸಿ ತಾನೇ ದೊರೆಯೆಂದು ಸಾರಿದನು. [11]

ಆ ಸಮಯದಲ್ಲಿ ಇಕ್ಕೇರಿಗೆ ಹೋಗುವುದು ಅಪಾಯವೆಂದರಿತ ವೀರಭದ್ರನು ಆನಂದಪುರದಲ್ಲಿಯೇ ತಾತ್ಕಾಲಿಕವಾಗಿ ನೆಲಸಿದನು. ಹನುಮ ನಾಯಕನೆಂಬ ಬೇಡರ ಪಡೆಯ ಒಡೆಯನ ಸಹಾಯದಿಂದ ಇಕ್ಕೇರಿಗೆ ಮುತ್ತಿಗೆ ಹಾಕಲು, ಆ ಯತ್ನ ಫಲಕಾರಿಯಾಗಲಿಲ್ಲ. ದೊರೆಯು ಮುಂದಿನ ಕಾರ್ಯಕ್ರಮವನ್ನು ಹೇಗೆ ರೂಪಿಸಬೇಕೆಂದು ಯೋಚನೆ ಮಾಡುತ್ತ ಆನಂದ ಪುರದಲ್ಲಿಯೇ ಉಳಿದನು.

ವೀರಭದ್ರನಾಯಕನು ತನ್ನ ಮೇಲೆ ಬೀಳಲು, ಶೃಂಗೇರಿಯ ಜನವೇ ಕಾರಣವೆಂದು ಕನಲಿದ ಭೈರವನು ಶೃಂಗೇರಿಯ ಮೇಲೆ ತನ್ನ ಸೇಡನ್ನು ತೀರಿಸಿಕೊಳ್ಳುವ ನಿರ್ಧಾರಮಾಡಿದನು. ಮೊದಲ ಸಲ ನಡೆದ ಕಾದಾಟದಲ್ಲಿ, ಶೃಂಗೇರಿಯು ತನ್ನ ವಶವಾದೊಡನೆಯೇ ಅಲ್ಲಿನ ವ್ಯಾಪಾರಿಗಳೂ ಶ್ರೀಮಂತರೂ ಊರು ಬಿಟ್ಟು ಹೋದುದು, ವೀರಭದ್ರನ ಯುದ್ಧ ಕಾರ್ಯದಲ್ಲಿ

11 ಕೆ. ವೃ. ಪು. ಪುಟ 94

Sri Vidyabharathi Book Centre, Sringeri

CC-O. In Public Domain. Digitized by.eGangotri

ಶೃಂಗೇರಿಯ ಜನ ಸಹಾನುಭೂತಿ ತೋರಿಬಂದು, ಗುರುಗಳು ಕಳಸಕ್ಕೆ ಬಂದಿದ್ದಾಗ ವೀರಭದ್ರನ ಬಗೆಗೆ ನೆಚ್ಚುಗೆಯ ನುಡಿಗಳನ್ನು ಆಡಿದುದು, ಭೈರವನಿಗೆ ಸಹಿಸಲಾರದಷ್ಟು ಕೋಪವನ್ನು ತಂದಿದ್ದುವು.

೭

ಶೃಂಗೇರಿಯನ್ನು ಉಗ್ರವಾಗಿ ಕಾಡಲು ನಿರ್ಧರಿಸಿದ ಭೈರವನು ಪೂರ್ವಭಾವಿಯಾಗಿ ತನ್ನ ಚಟುವಟಿಕೆಗಳನ್ನು ಆರಂಭಿಸಿದನು. ಅವನ ಅಧಿಕಾರಿಗಳು ಕೊಂಡ ಭಟ್ಟರನ್ನೂ ಇತರ ಮುಖ್ಯ ಪ್ರಜಾನಾಯಕರನ್ನೂ ಬಂಧಿಸಿದರು. ಬಂಧಿತರನ್ನು ಕಳಸಕ್ಕೆ ಕರೆದುಕೊಂಡು ಹೋಗಿ ಸೆರೆಯಲ್ಲಿಟ್ಟರು. ಇದರಿಂದ ಭೀತರಾದ ಹಲವು ಮಂದಿ ನಾಗರಿಕರೂ ಶೃಂಗೇರಿಯಿಂದ ತಲೆತಪ್ಪಿಸಿಕೊಂಡು ಆನಂದಪುರದಲ್ಲಿದ್ದ ವೀರಭದ್ರನಾಯಕನ ಆಶ್ರಯಕ್ಕೆ ಹೋದರು. ಸ್ವಾಮಿಗಳು ಮಾತ್ರ ತಮ್ಮ ಆಪ್ತ ಅನುಚರರೊಡನೆ ಶೃಂಗೇರಿಯಲ್ಲಿಯೇ ಉಳಿದುಕೊಂಡು, ಜನಕ್ಕೆ ಧೈರ್ಯ, ಸ್ಥೈರ್ಯ, ಗಳನ್ನು ತುಂಬುತ್ತ ಆತ್ಮವಿಶ್ವಾಸವನ್ನು ಮೂಡಿಸುತ್ತಿದ್ದರು. ಶತ್ರು ಭೀತಿ ನಿವಾರಣೆಗಾಗಿ ಧ್ಯಾನ, ಪೂಜೆ, ತಪ, ಜಪಗಳನ್ನು ತಾವು ಮಾಡುತ್ತಲೂ ಇತರರಿಂದ ಮಾಡಿಸುತ್ತಲೂ ಇದ್ದರು.

ಜ್ಞಾನೇಂದ್ರ ಭಟ್ಟನು[12] ತಾನು ಜನಕ್ಕೆ ಉಪಕಾರ ಮಾಡುವೆನೆಂದೆಣಿಸಿ, ಪುನಃ ಹೋಗಿ ಭೈರವನನ್ನು ಸಂಧಿಸಿ, ತಾನು ಎರಡು ಸಾವಿರದ ಐದುನೂರು ಚಿನ್ನದ ವರಹಗಳನ್ನು ತಂದು ಒಪ್ಪಿಸುವುದಾಗಿಯೂ, ಭೈರವನು ಶೃಂಗೇರಿಗೆ ಅಪಾಯ ಮಾಡದೇ ಹೊರಟುಹೋಗಬೇಕೆಂದೂ ಸೂಚಿಸಿದನು. ಹಣದ ರುಚಿಯನ್ನು ಮೊದಲೇ ಕಂಡಿದ್ದ ಭೈರವನು ಅದನ್ನು ಒಪ್ಪಿಕೊಳ್ಳಲು, ಭಟ್ಟನು ಗುರುಗಳನ್ನು ದರ್ಶಿಸಿ ತನ್ನ ಏರ್ಪಾಡನ್ನು ತಿಳಿಸಿದನು. ಭಟ್ಟನ ಈ ಅನುಚಿತ ನಿರ್ಧಾರದಿಂದ ಗುರುಗಳಿಗೆ

12 ಈತನು ಭೈರವನಿಂದ ಲಂಚ ಪಡೆದು ಅವನ ಪರವಾಗಿ ಕೆಲಸ ಮಾಡಿದನೆಂದು ಗುರುವಂಶ ಕಾವ್ಯದಲ್ಲಿ ಇದೆಯೆಂದು ಶ್ರೀ ಆರ್. ನರಸಿಂಹಾಚಾರ್ಯರು ಬರೆದಿದ್ದಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕೋಪ ಬಂದಿತು. ಭೈರವನನ್ನು ಈ ರೀತಿಯಾಗಿ ಒಲಿಸಿಕೊಳ್ಳಲು ಪ್ರಾರಂಭಿಸಿದರೆ ಅದಕ್ಕೆ ಕೊನೆ ಮೊದಲೆಲ್ಲಿ ? ಜ್ಞಾನೇಂದ್ರನ ಈ ಪ್ರಯತ್ನ ತಾತ್ಕಾಲಿಕವಾಗಿ ಶತ್ರುವನ್ನು ದೂರವಿಟ್ಟರೂ, ಮುಂದೆ ಶತ್ರುಭೀತಿಯು ಪೂರ್ಣವಾಗಿ ತಪ್ಪುವ ಭರವಸೆಯಿರಲಿಲ್ಲ. ಆದರೆ ಅದು ಕೋಪದ ಸಮಯವಾಗಿರಲಿಲ್ಲ. ಮಠದ ಭೂಮಿ ಕಾಣಿಯೆಲ್ಲವೂ ಶತ್ರುವಶವಾಗಿದ್ದು, ಪ್ರಜೆಗಳು ಭಯಗ್ರಸ್ತರಾಗಿದ್ದರು. ಅನುಕೂಲವಂತರಾದವರು ಊರನ್ನೇ ಬಿಟ್ಟು ಹೋಗಿದ್ದರು. ಉಳಿದಿದ್ದ ಜನರೋ ಬಡವರು. ಮಠದಲ್ಲಿ ಹಣವಿರಲಿಲ್ಲ. ಹೀಗಿದ್ದ ಪರಿಸ್ಥಿತಿಯಲ್ಲಿ ೨೫೦೦ ವರಹಗಳನ್ನು ಎಲ್ಲಿಂದ ತರುವುದು ? ಸ್ವಾಮಿಗಳು ಭಟ್ಟನ ಸಲಹೆಯನ್ನು ಒಪ್ಪದೆ, ಶೃಂಗೇರಿಯನ್ನು ಬಿಟ್ಟು, ತುಂಗಾನದಿಯು ಪಶ್ಚಿಮವಾಹಿನಿಯಾಗಿ ಹರಿಯುವಲ್ಲಿ-ವಿದ್ಯಾರಣ್ಯ ಪುರದ ವಸಿಷ್ಠ ಕ್ಷೇತ್ರಕ್ಕೆ-ಹೋಗಿ ಪರ್ಣಕುಟಿಯಲ್ಲಿ ತಪೋನಿರತರಾದರು.

ಜ್ಞಾನೇಂದ್ರ ಭಟ್ಟರು ಬಹಳ ಪ್ರಯತ್ನಮಾಡಿ ಜನಗಳಿಂದ ಹಣವನ್ನು ಸಂಗ್ರಹಿಸಿ, ಭೈರವನಿಗೆ ಕೊಟ್ಟು, ಶತ್ರುಕಾಟವನ್ನು ತಾತ್ಕಾಲಿಕವಾಗಿ ತೊಲಗಿಸಿದರು. ಭೈರವನು ಹೊರಟು ಹೋದುದನ್ನು ಸ್ವಾಮಿಗಳಿಗೆ ತಿಳಿಸಿದರು. ಸ್ವಾಮಿಗಳು ಶೃಂಗೇರಿಗೆ ಮರಳಿದರು.

ಇದೇ ಸಮಯಕ್ಕೆ ಸರಿಯಾಗಿ ಇಕ್ಕೇರಿಯ ಸಿಂಹಾಸನವನ್ನು ಆಕ್ರಮಿಸಿದ್ದ ವೀರವೊಡೆಯನು ಮೃತನಾದನು. ಪುನಃ ಹಲವು ಜನ ದುರುಳರ ಸಹಾಯದಿಂದ ಸದಾಶಿವ ನಾಯಕನೆಂಬುವನು ಸಿಂಹಾಸನವನ್ನು ಆಕ್ರಮಿಸುವ ಸನ್ನಾಹದಲ್ಲಿದ್ದನು. ಆಗ ವೀರಭದ್ರ ನಾಯಕನು, ಸೇನೆಯನ್ನು ತೆಗೆದುಕೊಂಡು ಇಕ್ಕೇರಿಗೆ ಹೋಗಿ ಯುದ್ಧದಲ್ಲಿ ಅವನದನ್ನು ವಶಪಡಿಸಿಕೊಂಡನು. ಸದಾಶಿವ ನಾಯಕನು ತಲೆತಪ್ಪಿಸಿಕೊಂಡು ಓಡಿಹೋದನು. ವೀರಭದ್ರನು ಪುನಃ ಸಿಂಹಾಸನಾರೋಹಣ ಮಾಡಿದನು. ಬೊಕ್ಕುಂಜೆ ಎಂಬಲ್ಲಿ ಬಿಡಾರ ಮಾಡಿದ್ದ ವೀರಭದ್ರನಾಯಕನನ್ನು ಗುರುಗಳೇ ಸ್ವತಃ ಹೋಗಿ ನೋಡಿ ಅವನನ್ನು ಆಶೀರ್ವದಿಸಿ, ಪುನಃ ಅವನಿಗೆ ರಾಜ್ಯಪ್ರಾಪ್ತಿಯಾಗುವುದೆಂದು ಹರಸಿ ಬಂದಿದ್ದರು. ಅವರ ಹರಕೆಯೂ ನೆರವೇರಿತ್ತು.

ಸ್ವಲ್ಪಕಾಲ ಶೃಂಗೇರಿಯಲ್ಲಿ ಶಾಂತಿಯು ನೆಲಸಿತ್ತು. ಗುರುಗಳು ಆ ಸಮಯದಲ್ಲಿ ಮಾಯಾಭಟ್ಟನೆಂಬವನಿಂದ ಮಹಾಭಾರತದ ಪ್ರವಚನ

CC-O. Mumukshu Bhawan Varanasi Collection. Digitized by eGangotri

CC-O. In Public Domain. Digitized by eGangotri

ವನ್ನೂ, ಅಹೋಬಲ ಭಟ್ಟರೆಂಬುವರಿಂದ ರಾಮಾಯಣದ ಪುನರ್ವಚನವನ್ನೂ ಏರ್ಪಡಿಸಿದ್ದರು. ಪ್ರತಿದಿನವೂ ತಾವೂ ಸಹ ಆ ವ್ಯಾಖ್ಯಾನ ಸಭೆಯಲ್ಲಿ ಬಂದು ಭಾಗವಹಿಸುತ್ತಿದ್ದರು. ರಾಮಾಯಣವು ಬಾಲ್ಯದಿಂದಲೂ ಅವರಿಗೆ ಅತ್ಯಂತ ಪ್ರಿಯವಾದ ಕಾವ್ಯವಾಗಿತ್ತು. ಗುರುಗಳು ತಾವೇ ಸ್ವತಃ "ರಾಮಚಂದ್ರ ಮಹೋದಯ" ಎಂಬ ಸಂಸ್ಕೃತ ಕಾವ್ಯವನ್ನು ರಚಿಸಿದ್ದರು.

ಲ

ಶೃಂಗೇರಿಗೆ ಭೈರವನ ಕಾಟ ಮತ್ತೆ ಪ್ರಾರಂಭವಾಯಿತು.

ವೀರಭದ್ರನಾಯಕನು ಇಕ್ಕೇರಿಗೆ ಹಿಂದಿರುಗಿ ಆಡಳಿತವನ್ನು ತನ್ನ ಕೈಗೆ ತೆಗೆದುಕೊಂಡನಂತರ, ಪುನಃ ಭೈರವನ ಮೇಲೆ ಯುದ್ಧಕ್ಕೆ ತೊಡಗಿದನು. ಈ ಯುದ್ಧದಲ್ಲಿ ಜಯಶಾಲಿಯಾಗಿ ಭೈರವನಿಂದ ಆಕ್ರಮಿಸಲ್ಪಟ್ಟಿದ್ದ ಬಹುಭಾಗವನ್ನು ವಶಪಡಿಸಿಕೊಂಡನು.

ಇದಕ್ಕೆಲ್ಲಾ ಶೃಂಗೇರಿಯ ಸ್ವಾಮಿಗಳೇ ಕಾರಣವೆಂದು ಬಗೆದ ಭೈರವನು ತನ್ನ ನಂಜನ್ನು ಶೃಂಗೇರಿಯತ್ತ ತಿರುಗಿಸಿದನು. ವೀರಭದ್ರ ನಾಯಕನು ಇಕ್ಕೇರಿಗೆ ಹಿಂದಿರುಗುವ ಮುನ್ನ ಶ್ರೀ ಸಚ್ಚಿದಾನಂದ ಭಾರತಿಯವರು ಅವನನ್ನು ಬೊಕ್ಕುಂಜೆಯಲ್ಲಿ ಭೇಟಿಮಾಡಿದ್ದು, ಈ ಗುರುಶಿಷ್ಯರ ಭೇಟಿಯನ್ನು ಭೈರವನು ತನ್ನ ಮೇಲಣ ಪಿತೂರಿಗಾಗಿ ಎಂದು ತಪ್ಪಾಗಿ ಗ್ರಹಿಸಿದ್ದನು. ಇದರಿಂದ ಕೋಪಾವಿಷ್ಟನಾಗಿದ್ದ ಭೈರವನು ಶೃಂಗೇರಿಯನ್ನು ಧ್ವಂಸಮಾಡಲು ಹಟತೊಟ್ಟನು.

ಈ ಸಲದ ಮುತ್ತಿಗೆ ಪ್ರಬಲಕರವಾಗಿದ್ದು ಭೈರವನು ಶೃಂಗೇರಿ ಊರನ್ನೂ ಮಠವನ್ನೂ ಸ್ವೇಚ್ಛೆಯಾಗಿ ಲೂಟಿಮಾಡಿದನು. ಜನಗಳು ಭಯದಿಂದ ಕಂಗಾಲಾಗಿ ಊರುಬಿಟ್ಟು ಹೋದರು. ಮಠದ ಸೇವಕರೂ, ಕೆಲಸಗಾರರೂ ಸಹ ಸ್ವಾಮಿಗಳವರೊಬ್ಬರನ್ನೇ ಬಿಟ್ಟು ಓಡಿ ಹೋದರು. ಸ್ವಾಮಿಗಳು ಮಾತ್ರ ನಿರ್ಭಯದಿಂದ ಏಕಾಂಗಿಯಾಗಿ ಮಠದಲ್ಲಿಯೇ ಉಳಿದುಕೊಂಡು ತಮ್ಮ ಪೂಜೆ, ಧ್ಯಾನ, ತಪ, ಜಪಾದಿಗಳನ್ನು,

Sri Vidyabharathi Book Centre, Sringeri

CC-O. In Public Domain. Digitized by eGangotri

ಉಗ್ರವಾದ ಉಪಾಸನೆಯನ್ನೂ ಕೈಗೊಂಡರು. ಆ ರಾತ್ರಿ ಅವರ ಸ್ವಪ್ನದಲ್ಲಿ ದಂಡಧಾರಿಯಾದ ಸ್ತ್ರೀಮೂರ್ತಿಯೊಂದು ಗೋಚರಿಸಿ, ತಾನು ಶೃಂಗೇರಿಯನ್ನು ರಕ್ಷಿಸುವುದಾಗಿ ಅಭಯವಿತ್ತಂತಾಯಿತು. ಎಚ್ಚರ ಹೊಂದಿದ ಗುರುಗಳಿಗೆ ಆದು ಸಾಕ್ಷಾತ್ ಶ್ರೀ ಶಾರದೆಯ ಅಭಯ ವರಪ್ರದಾನವೆಂದು ದೃಢವಾಯಿತು.

ಎಂಟು ದಿನಗಳಕಾಲ ಭೈರವನ ಅಟ್ಟಹಾಸ ನಡೆಯುತ್ತಲೇ ಇತ್ತು. ಈ ಮಧ್ಯೆ ಶೃಂಗೇರಿಯ ಪರಿಸ್ಥಿತಿಯನ್ನು ಕುರಿತ ವರದಿ ವೀರಭದ್ರನಾಯಕನಿಗೆ ಗೂಢಚಾರರ ಮೂಲಕ ತಿಳಿದು, ಅವನು ಶೃಂಗೇರಿಯ ರಕ್ಷಣೆಗೆ ಹೊರಡಬೇಕೆಂದು ಸೇನಾಪತಿ ದೇವರಾಯನಿಗೆ ಆಜ್ಞೆಮಾಡಿದನು. ದೇವರಾಯನ ಸೈನ್ಯ ಒಂಭತ್ತನೆಯ ದಿನ ಶೃಂಗೇರಿಯ ಬಳಿಗೆ ಬಂದಿತು. ಆ ಸಮಯದಲ್ಲಿ ಸ್ವಾಮಿಗಳು ಶೃಂಗೇರಿಯ ದಕ್ಷಿಣಕ್ಕಿದ್ದ ಆಗ್ರಹಾರ ವೈಕುಂಠಪುರದಲ್ಲಿ ಉಪಾಸನೆಯಲ್ಲಿದ್ದರು.

ಶೃಂಗೇರಿಯತ್ತ ಹೊರಟಿದ್ದ ವೀರಭದ್ರನ ಸೈನ್ಯ ಬೆಟ್ಟಗುಡ್ಡಗಳನ್ನು ಹತ್ತಿ ಇಳಿದು ಬರುತ್ತಿದ್ದಾಗ, ವೈಕುಂಠಪುರದಲ್ಲಿ ತುಂಗಾತೀರದಲ್ಲಿ ಪರ್ಣಕುಟಿಯಲ್ಲಿದ್ದ ಸ್ವಾಮಿಗಳನ್ನು ಕಂಡು ಅಲ್ಲಿಗೆ ಬಂದರು. ಸೈನ್ಯದ ದಳವಾಯಿ ದೇವರಾಯನೂ ಮತ್ತಿತರ ಅಧಿಕಾರಿಗಳೂ ಗುರುಗಳ ಸನ್ನಿಧಿಗೆ ಬಂದು ಸಾಷ್ಟಾಂಗ ಪ್ರಣಾಮಮಾಡಿ, ಭೈರವನಿಂದ ಶೃಂಗೇರಿಯನ್ನು ಬಿಡಿಸಿಕೊಳ್ಳುವುದಕ್ಕಾಗಿಯೇ ತಾವು ಬಂದಿರುವುದಾಗಿ ತಿಳಿಸಿದರು. ಗುರುಗಳು ದಯವಿಟ್ಟು ತಮ್ಮ ಸೈನ್ಯದ ರಕ್ಷಣೆಯಲ್ಲಿಯೇ ಶೃಂಗೇರಿಗೆ ಹಿಂದಿರುಗ ಬೇಕೆಂದೂ ಪ್ರಾರ್ಥನೆ ಸಲ್ಲಿಸಿದರು. ಆದರೆ ಗುರುಗಳು ಆದರ ಪರಿಣಾಮವೇನೆಂಬುದನ್ನು ವಿವರಿಸಿ, ತಮಗೆ ಇಕ್ಕೇರಿಯ ಸೈನ್ಯದಲ್ಲಿ ಭರವಸೆ ಇದ್ದರೂ, ತಾವು ಯಾರೊಬ್ಬರೊಡನೆಯೂ ಸೇರದೆ ತಟಸ್ಥರಾಗಿದ್ದು, ಯುದ್ಧದ ಅನಂತರ ಶೃಂಗೇರಿಗೆ ಬರುವ ಸಂಕಲ್ಪವನ್ನು ತಿಳಿಸಿದರು. ಸೈನ್ಯದ ವಿಜಯಕ್ಕಾಗಿ ತಾವು ಉಪಾಸನಾನಿರತರಾಗಿರುವುದಾಗಿ ವಿವರಿಸಿದರು.

ಗುರುಗಳಿಂದ ಅಪ್ಪಣೆ ಪಡೆದು ಹೊರಟ ಇಕ್ಕೇರಿಯ ಸೈನ್ಯ ಭೈರವನೊಡನೆ ಹಣಾಹಣಿ ಕಾಳಗಕ್ಕೆ ಇಳಿಯಿತು. ಶೌರ್ಯದಿಂದ ಕಾದಾಡಿ, ಭೈರವನ ಮುತ್ತಿಗೆಯನ್ನು ತೆಗೆಸಿತ್ತು. ಕೋಪದಿಂದ ಕನಲಿದ ಭೈರವನು

Sri Vidyabharathi Book Centre, Sringeri

CC-O. In Public Domain. Digitized by eGangotri

ಬುಸುಗುಟ್ಟುತ್ತಾ ತಾತ್ಕಾಲಿಕವಾಗಿ ಸೈನ್ಯದೊಡನೆ ಹಿಂದಿರುಗಿದನು. ಶೃಂಗೇರಿಯು ಭೈರವನ ಮುಷ್ಟಿಯಿಂದ ಮುಕ್ತವಾದ ಸಂಗತಿಯನ್ನು ಗುರುಗಳಿಗೆ ತಿಳಿಸಿ, ಅವರನ್ನು ಗೌರವ ಪೂರ್ವಕವಾಗಿ ಶೃಂಗೇರಿಗೆ ಕರೆತರ ಲಾಯಿತು. ಶ್ರೀ ಮಠವನ್ನು ಪಾದಚಾರಿಗಳಾಗಿಯೇ ಪ್ರವೇಶಿಸಿದ ಶ್ರೀ ಗುರುಗಳಿಗೆ ಇಕ್ಕೇರಿಯ ಸೈನ್ಯ ಗೌರವ ರಕ್ಷಣೆ ನೀಡಿತು. ಅಷ್ಟೇ ಅಲ್ಲದೆ ಭಕ್ತಿ ನಮ್ರತೆಯಿಂದ ಪ್ರತಿ ಸೈನಿಕನೂ ಅವರ ಪಾದಗಳನ್ನು ಸ್ಪರ್ಶಿಸಿ ಅಭಿವಾದನ ಮಾಡಿದನು. ಇದರಲ್ಲಿ ಹಿಂದೂ ಸೈನಿಕರಷ್ಟೇ ಅಲ್ಲದೆ ಮುಸಲ್ಮಾನ ಸೈನಿಕರೂ ಇದ್ದು, ಅವರೂ ಸಹ ಶ್ರೀ ಗುರುಗಳ ಪಾದಧೂಳಿ ಯನ್ನು ಶಿರಸ್ಸಿನಲ್ಲಿ ಧರಿಸಿದರು. ಆ ರಾತ್ರಿ ಗುರುಗಳು ಸೈನಿಕರೆಲ್ಲರಿಗೂ, ಮಠದ ಕಡೆಯಿಂದಲೇ ಔತಣಕೂಟವನ್ನು ಏರ್ಪಡಿಸಿದ್ದರು.

ಶೃಂಗೇರಿಯ ರಕ್ಷಣೆಗಾಗಿ, ದಳವಾಯಿಯ ಆಜ್ಞೆಯಂತೆ, ಸಣ್ಣ ಕೋಟೆಯು ನಿರ್ಮಿಸಲ್ಪಟ್ಟಿತು. ಅಲ್ಲಿ ಸೈನ್ಯದ ತುಕಡಿಯೊಂದು ಸದಾ ಇರಲು ವ್ಯವಸ್ಥೆಯಾಯಿತು.

ಶೃಂಗೇರಿಯು ಭೈರವನಿಂದ ಬಿಡಿಸಲ್ಪಟ್ಟು ಮತ್ತೆ ಗುರುಗಳಿಗೇ ಒಪ್ಪಿಸಲ್ಪಟ್ಟ ಸುದ್ದಿಯನ್ನು ಕೇಳಿ ವೀರಭದ್ರನಾಯಕನು ಹರ್ಷಪಟ್ಟನು. ಗುರುಗಳನ್ನು ದರ್ಶಿಸಲು ತಾನೇ ಶೃಂಗೇರಿಗೆ ಬಂದನು.

ರಾಜೋಚಿತವಾದ ಸಮಸ್ತ ಗೌರವಗಳಿಂದ ಮಠದ ಅಧಿಕಾರಿಗಳೂ ನಾಗರಿಕರೂ ವೀರಭದ್ರನನ್ನು ಸ್ವಾಗತಿಸಿದರು. ದೊರೆಯು ಎಲ್ಲಾ ದೇವಾಲಯಗಳಿಗೂ ಹೋಗಿ, ದರ್ಶನ ಪಡೆದು ಶ್ರೀ ಶ್ರೀಗಳವರ ದರ್ಶನಕ್ಕಾಗಿ ಬಂದನು. ಗುರುಗಳವರು ಅವನನ್ನು ಉಚಿತವಾಗಿ ಸ್ವಾಗತಿಸಿ, ಶತ್ರುವಿನಿಂದ ಶೃಂಗೇರಿಯನ್ನೂ, ಮಠವನ್ನೂ ರಕ್ಷಿಸಿದ ವೀರಭದ್ರನ ಸೈನ್ಯಕ್ಕೆ ಮೆಚ್ಚುಗೆಯನ್ನು ಸೂಚಿಸಿದರು. ಇದಕ್ಕೆಲ್ಲಾ ವೀರಭದ್ರನ ಗುರುಭಕ್ತಿಯೇ ಕಾರಣವೆಂದು ಶ್ಲಾಘಿಸಿದರು. ದೊರೆ ವೆಂಕಟಪ್ಪನಾಯಕ ನಂತೆಯೇ, ವೀರಭದ್ರ ನಾಯಕನೂ ಮಠದಲ್ಲಿಯೂ ದೇವರಲ್ಲಿಯೂ ಏಕರೀತಿಯಾದ ಭಕ್ತಿ ಶ್ರದ್ಧೆಗಳನ್ನು ಹೊಂದಿರಬೇಕೆಂದೂ ಹೇಳಿದರು ಸ್ವಲ್ಪ ದಿನಗಳ ಕಾಲ ಶೃಂಗೇರಿಯಲ್ಲಿಯೇ ಇದ್ದ ದೊರೆಯು, ತನ್ನ ಸೈನ್ಯಕ್ಕೆ ನಗರ ರಕ್ಷಣೆಯ ಬಗ್ಗೆ ಸೂಕ್ತ ಸಲಹೆ ನೀಡಿ ಗುರುಗಳ ಆಶೀರ್ವಾದ

Sri Vidyabharathi Book Centre, Sringeri

CC-O. In Public Domain. Digitized by eGangotri

ಅನುಗ್ರಹಗಳನ್ನು ಪಡೆದು ಇಕ್ಕೇರಿಗೆ ಹಿಂದಿರುಗಿದನು. ತನ್ನ ಈ ಭೇಟಿಯ ಸಂದರ್ಭದಲ್ಲಿ ವೀರಭದ್ರನು ಮಠಕ್ಕೆ, ಮನೆವಾರ್ತೆ ವೆಂಕಣ್ಣನು ಪಟುಗುಪ್ಪೆಯಲ್ಲಿ ಕಟ್ಟಿಸಿದ ಶೃಂಗೇರಿ ಮಠವನ್ನೂ, ಚಾವಡೀಸೆಟ್ಟಿಕೊಪ್ಪ ಗ್ರಾಮವನ್ನೂ, ನಗರದ ತಾಲ್ಲೂಕಿನ ಗೋರುಗದ್ದೆ ಗ್ರಾಮವನ್ನೂ ದಾನವಾಡಿದನು [13]

೯

ಶೃಂಗೇರಿಯ ರಕ್ಷಣೆಗಾಗಿ ಕೋಟೆಯನ್ನು ನಿರ್ಮಿಸಿ, ವೀರಭದ್ರ ನಾಯಕನು ತನ್ನ ಸೈನ್ಯವನ್ನು ಅಲ್ಲಿಯೇ ಬಿಟ್ಟಿದ್ದುದು ಭೈರವನಿಗೆ ಅತ್ಯಂತ ಕೋಪಕ್ಕೆ ಕಾರಣವಾಗಿತ್ತು. ಸೋತು ಹಿಮ್ಮೆಟ್ಟಿ ಹೋದಾಗಿನಿಂದಲೂ ಸೇಡು ತೀರಿಸಿಕೊಳ್ಳಲು ಅವನು ಹವಣಿಸುತ್ತಲೇ ಇದ್ದನು.

ಭೈರವನು ಪುನಃ ಸೈನ್ಯವನ್ನು ಜಮಾವಣೆ ಮಾಡಿಕೊಂಡು, ಬೇಲೂರು ಪಾಳೆಯಗಾರನ ಸಹಾಯ ಪಡೆದುಕೊಂಡು ಶೃಂಗೇರಿಯತ್ತ ಹೊರಟನು. ಅದೇ ವೇಳೆಗೆ ಗುರುಗಳಿಗೆ ತಿಳಿಸದೇನೇ, ವೀರಭದ್ರನ ದಳವಾಯಿಯು ಸೈನ್ಯದ ಬಹುಭಾಗವನ್ನು ಶ್ವೇತದುರ್ಗಕ್ಕೆ ಕಳಿಸಿಬಿಟ್ಟಿದ್ದನು. ಆಗ ಶೃಂಗೇರಿಯಲ್ಲಿ ಕೇವಲ ೩೦೦ ಜನ ಪದಾತಿಗಳೂ, ೧೦೦ ಜನ ಅಶ್ವದಳದವರೂ ಇದ್ದರು.

ಸ್ವಲ್ಪದಿನ ನೆಮ್ಮದಿಯಿಂದ ಇದ್ದ ನಾಗರಿಕರು ಮತ್ತೆ ಭೈರವನ ಸೈನ್ಯ ಬರುತ್ತಿರುವುದನ್ನು ಅರಿತು, ಅಪರ ಉಪಟಳಕ್ಕೆ ಹೆದರಿ ಊರು ಬಿಡಲು ನಿರ್ಧರಿಸಿದರು. ಆಪ್ತ ಶಿಷ್ಯರಾದವರು ಶ್ರೀ ಗುರುಗಳಿಗೂ ಸಹ ಶತ್ರುಭಯವನ್ನು ವಿವರಿಸಿ, ಊರು ಬಿಟ್ಟು ದೂರ ಹೊರಟು ಹೋಗುವುದೇ ಉತ್ತಮವೆಂದು ಸಲಹೆಮಾಡಿದರು. ಗುರುಗಳು ಶೃಂಗೇರಿಯನ್ನು ಬಿಟ್ಟು ಹೋದರೆ, ಊರನ್ನು ಬಿಡಲಾಗದ ಜನರನ್ನು ಅನ್ಯಾಯವಾಗಿ ಶತ್ರುವಿಗೆ

---

13 MAR 1933. No. 28–page182

ದೊರೆಯು ಶೃಂಗೇರಿಯಲ್ಲಿದ್ದ ಕಾಲದಲ್ಲಿ ಗುರುಗಳು ಆತನಿಗಾಗಿ ರಾಮಾಯಣ ಮಹಾ ಭಾರತಗಳ ಪ್ರವಚನಗಳನ್ನು ಏರ್ಪಡಿಸಿದ್ದರು.

Sri Vidyabharathi Book Centre, Sringeri

 CC-O. In Public Domain. Digitized by eGangotri

ಒಪ್ಪಿಸಿದಂತಾಗುತ್ತದೆ ; ಹೋಗದಿದ್ದರೆ ಶತ್ರುವಿನ ಧಾಳಿಯನ್ನು ನಿಸ್ಸಹಾಯಕರಾಗಿ ಅನುಭವಿಸಬೇಕಾಗುತ್ತದೆ, ಏನು ಮಾಡೋಣವೆಂದು ಚಿಂತಿಸುತ್ತಿದ್ದರು.

ಬಹುಕಾಲ ಯೋಚಿಸಿದ ಗುರುಗಳು ಶ್ರೀ ಶಾರದಾ ಸನ್ನಿಧಿಗೆ ಹೋಗಿ ಗದ್ಗದರಾಗಿ ಪ್ರಾರ್ಥನೆ ಸಲ್ಲಿಸಿದರು. ಜಗನ್ಮಾತೆಯ ಚರಣ ತಲದಲ್ಲಿ ಸಂಪೂರ್ಣ ಶರಣಾಗತರಾಗಿ, ಶೃಂಗೇರಿ ಪುರದ ರಕ್ಷಣೆಯನ್ನು ಆಕೆಯೇ ನೋಡಿಕೊಳ್ಳಬೇಕೆಂದು ಹಲವು ಪರಿಯಾಗಿ ಬೇಡಿಕೊಂಡರು.

ವೀರಭದ್ರನ ದಳವಾಯಿಯ ಚಲನವಲನಗಳು ಅವನು ಭೈರವನಿಂದ ಪ್ರಲೋಭನೆಗೆ ಒಳಗಾಗಿದ್ದನೇನೋ ಎನ್ನುವ ಶಂಕೆಗೆ ಆಸ್ಪದವಾಗಿದ್ದುವು. ಅವನು ಸೈನ್ಯದ ಬಹು ಭಾಗವನ್ನು ಮೊದಲೇ ಶ್ವೇತದುರ್ಗಕ್ಕೆ ಕಳುಹಿಸಿಬಿಟ್ಟಿದ್ದನು. ಈಗ ಉಳಿದ ಸೈನ್ಯವೂ ಹೊರಟು ಹೋಗುತ್ತಿದೆಯೆಂದು ಗುರುಗಳಿಗೆ ವರ್ತಮಾನ ಬಂದಿತು. ಮೊದಲಸಲ ಸೈನ್ಯವನ್ನು ಕಳಿಸಿದಾಗಲಾಗಲಿ, ಈಗಲಾಗಲಿ ದಳವಾಯಿ ಗುರುಗಳ ದರ್ಶನವನ್ನು ಪಡೆಯದೆ, ಸೈನ್ಯದ ವಾಪಸಾತಿಯ ಬಗೆಗೆ ಕಾರಣವನ್ನೂ ಕೊಡದೆ, ಮೌನವಾಗಿದ್ದನು. ಈ ವಿಷಯ ವೀರಭದ್ರನಿಗೆ ತಿಳಿದು, ಅವನು ತನ್ನ ದಳವಾಯಿಯ ಅವಿವೇಕದ ನಡತೆಗಾಗಿ ಅಸಮಾಧಾನಗೊಂಡು, ಸೈನ್ಯವನ್ನು ಮತ್ತೆ ಶೃಂಗೇರಿಗೆ ಕಳುಹಿಸಿದನೆಂಬ ವಾರ್ತೆಯೂ ಗುರುಗಳಿಗೆ ಬಂದು ಅವರಿಗೆ ಸ್ವಲ್ಪ ಸಮಾಧಾನವಾಯಿತು.

ಈ ಸಲದ ಕದನ ಘೋರತರದ್ದಾಗಬಹುದೆಂದು ನಿರೀಕ್ಷಿಸಿದ್ದ ಗುರುಗಳು, ಮೊದಲನೇ ಮನೆಯ ರಘುನಾಥ ಭಟ್ಟರೆಂಬ ವೃದ್ಧರನ್ನು ಬರಮಾಡಿಕೊಂಡು ಅವರೊಡನೆ ಮಂತ್ರಾಲೋಚನೆಯನ್ನು ನಡೆಸಿದರು. ಆ ವೇಳೆಗೆ ಸರಿಯಾಗಿ ವೀರಭದ್ರನ ದಳವಾಯಿಯ ಪ್ರತಿನಿಧಿಯೊಬ್ಬನು ಬಂದು, ಶೃಂಗೇರಿಯ ರಕ್ಷಣೆಗಾಗಿ ಮಾಡಬೇಕಾದ ಸೈನ್ಯದ ಸಜ್ಜು ಮತ್ತು ಕದನದ ವಿಧಾನವನ್ನು ವಿವರಿಸಿ ಸಲಹೆ ಕೇಳಿದನು. ರಘುನಾಥ ಭಟ್ಟರು ಏನೇ ಆಗಲಿ ಗುರುಗಳು ಶೃಂಗೇರಿಯನ್ನು ಬಿಟ್ಟು ಹೊರಗೆಲ್ಲೂ ಹೋಗಬಾರದೆಂದೂ, ಹೊರಟುಹೋದಲ್ಲಿ, ಜನ ಧೈರ್ಯಗುಂದುವರೆಂದೂ ಹೇಳಿ ಗುರುಗಳು, ಊರಲ್ಲಿಯೇ ಉಳಿದಿರಬೇಕೆಂದೂ ವಿಜ್ಞಪ್ತಿಮಾಡಿದರು. ಭಟ್ಟರ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಲಹೆಯನ್ನು ಗುರುಗಳು ಅಂಗೀಕರಿಸಿ, ಶೃಂಗೇರಿಯಲ್ಲಿಯೇ ಉಳಿಯುವ ನಿಶ್ಚಯ ಮಾಡಿದರು. ಸೈನ್ಯವು ಹಿಂದಿರುಗಿದ್ದರಿಂದ ಶೃಂಗೇರಿಯ ಹಲವು ಜನ ನಾಗರಿಕರೂ ಧೈರ್ಯದಿಂದ ಊರಲ್ಲಿಯೇ ಉಳಿದುಕೊಂಡರು.

ಶೃಂಗೇರಿಯಲ್ಲಿ ಅತ್ಯಂತ ಕಡಿಮೆ ಸೈನ್ಯ ಇದ್ದುದನ್ನು ಅರಿತಿದ್ದ ಭೈರವನು, ದೊಡ್ಡ ಸೈನ್ಯದಿಂದೊಡಗೂಡಿ ಬಂದು ಶೃಂಗೇರಿಯನ್ನು ಮುತ್ತಿದನು. ಶೃಂಗೇರಿಗೆ ಹೊರಗಿನಿಂದ ಯಾವ ಸಹಾಯವೂ ಬರದಂತೆ ಮೊದಲು ಭೈರವನು ಊರಿನ ಪ್ರವೇಶ ದ್ವಾರಗಳಲ್ಲಿಯೂ ಇತರ ಕಾಲು ದಾರಿಗಳಲ್ಲಿಯೂ ಭಾರಿ ಕಂದರಗಳನ್ನು ತೋಡಿಸಿದನು. ಅನಂತರ ಕಿರುಕುಳಿ ಯುದ್ಧವನ್ನು ಮಾಡಿದನು. ವೀರಭದ್ರನ ಸೈನ್ಯವು ಧೈರ್ಯ ಸ್ಥೈರ್ಯದಿಂದ ಕಾದಿದ್ದರೂ, ಅತಿ ಹೆಚ್ಚಿನ ಸಂಖ್ಯೆಯಲ್ಲಿದ್ದ ಭೈರವನ ಸೈನ್ಯವನ್ನು ಎದುರಿಸಲಾಗಲಿಲ್ಲ. ಸೋತು ಹಿಮ್ಮೆಟ್ಟಿದರು. ಭೈರವನ ಸೈನ್ಯ ಊರಿನೊಳಕ್ಕೆ ನುಗ್ಗಿತು. ಭೀತರಾದ ಜನ, ಪ್ರವಾಹದಂತೆ, ಮಠದ ಆವರಣದೊಳಕ್ಕೆ ರಕ್ಷಣೆಗಾಗಿ ಧಾವಿಸಿದರು. ಆಗ ಶೃಂಗೇರಿ ನಗರವು, ಒಂದು ಸೈನಿಕ ನಗರದಂತಿದ್ದು ಊರ ಹೊರಗೂ ಒಳಗೂ ಬರೀ ಸೈನಿಕರೇ ತುಂಬಿದ್ದರು.

ಮಠದ ಹೆಬ್ಬಾಗಿಲನ್ನು ಭದ್ರಪಡಿಸಿ ಜನಗಳ ಅನ್ನಾಹಾರಗಳಿಗೆ ಏರ್ಪಾಟು ನಡೆಸಿದ ಗುರುಗಳು, ಎಲ್ಲಾ ಆಲಯಗಳಲ್ಲಿಯೂ ಜಪಪೂಜಾದಿ ಗಳಿಗೆ ವ್ಯವಸ್ಥೆಮಾಡಿ, ತಾವು ಧ್ಯಾನಮಗ್ನರಾಗಿ ಕುಳಿತರು. ಭೈರವನ ಸೈನಿಕರು ಊರೊಳಕ್ಕೆ ನುಗ್ಗಿದರೂ, ಊರಿನಲ್ಲಿ ಎಲ್ಲಿಯೂ ಜನಗಳನ್ನು ಕಾಣದೆ, ಭಣಭಣಗುಡುತ್ತಿದ್ದ ಮನೆ ಗುಡಿಸಲುಗಳನ್ನು ಕಂಡು ವಿಸ್ಮಿತ ರಾದರು, ನಿರಾಶರಾದರು. ಇಷ್ಟಾದರೂ ವೀರಭದ್ರನ ಸೈನಿಕರು, ಊರಿನಲ್ಲಿ ಅಲ್ಲಲ್ಲಿ ಅವಿತುಕೊಂಡು ಭೈರವನ ಸೈನ್ಯದೊಡನೆ ಕಿರುಕುಳದ ಯುದ್ಧ ಮಾಡುತ್ತಲೇ ಇದ್ದರು.

ಈ ವೇಳೆಗೆ ಬೇಲೂರಿನ ಪಾಳೆಯಗಾರನ ದಳವಾಯಿಯಾದ ತಿರುವೆಂಕಟನೂ ತನ್ನ ಸೈನ್ಯದೊಡನೆ ಭೈರವನ ಸಹಾಯಕ್ಕೆ ಬಂದನು.

ತುಂಗಾನದಿಯ ಪೂರ್ವದಿಕ್ಕಿನಿಂದ ಸೊಳ್ಳೆಬೈಲುರಸ್ತೆಯಲ್ಲಿ ಬಂದ ತನ್ನ ಸೈನ್ಯವು ಶೃಂಗೇರಿಯನ್ನು ಸಮೀಪಿಸುತ್ತಲೆಲ್ಲಾ ತಿರುವೆಂಕಟನು

Sri Vidyabharathi Book Centre,Sringeri

CC-O. In Public Domain. Digitized by eGangotri

ವೀರಭದ್ರನ ಮೇಲೆ ಸೇಡು ತೀರಿಸುವ ಉತ್ಸಾಹದಲ್ಲಿಯೇ ಇದ್ದನು. ಗುಡ್ಡವೊಂದರ ನೆತ್ತಿಯನ್ನು ಏರುತ್ತಿದ್ದ ತಿರುವೆಂಕಟನು ಶೃಂಗೇರಿಯ ಶ್ರೀ ಮಲಹಾನಿಕೇಶ್ವರ, ಶ್ರೀ ವಿದ್ಯಾಶಂಕರ ದೇವಾಲಯಗಳ ಗೋಪುರಗಳನ್ನು ದರ್ಶಿಸುತ್ತಿದ್ದಂತೆ ಮೃದುಮನಸ್ಕನಾದನು. ದೇವ ಬ್ರಾಹ್ಮಣರಿಂದ, ಸಾತ್ವಿಕ ಜನರಿಂದ ತುಂಬಿರುವ, ಜಗದ್ಗುರುಗಳ ವಾಸಸ್ಥಾನವಾದ ಧರ್ಮಕ್ಷೇತ್ರವಾದ ಈ ಪವಿತ್ರ ಸ್ಥಳವನ್ನು ಮುತ್ತುವುದು ಯೋಗ್ಯವಲ್ಲವೆಂದು ಭಾವಿಸಿ, ತನ್ನ ಸೈನ್ಯದ ಚಲನವನ್ನು ಸ್ವಲ್ಪ ನಿಧಾನ ಮಾಡಿದನು. ಕಾಳನಾಯಕನೆಂಬ ಭೈರವನ ದಳವಾಯಿಯು ಎಷ್ಟೇ ಕೇಳಿಕೊಂಡರೂ, ತಿರುವೆಂಕಟನು ಮುನ್ನುಗ್ಗದೆ, ಕೇವಲ ವೀಕ್ಷಕನಾಗಿರುವುದೇ ಲೇಸೆಂದು ಭಾವಿಸಿ ತನ್ನ ಸೈನ್ಯಕ್ಕೂ ಸೂಕ್ತವಾದ ಆಜ್ಞೆ ನೀಡಿದನು.

ಇತ್ತ ಮಠದಲ್ಲಿ ಶ್ರೀ ಗುರುಗಳು ಉಗ್ರ ಉಪಾಸನೆಯೊಡನೆ, ದುರ್ಗಾ ಸಪ್ತಶತಿ ಪಾರಾಯಣಕ್ಕೂ, ಏರ್ಪಾಟು ಮಾಡಿದರು. ಶೃಂಗೇರಿಯ ಪರಿಸ್ಥಿತಿ ವೀರಭದ್ರನಾಯಕನಿಗೆ ತಿಳಿಯಲು, ಅವನು ಕೂಡಲೇ ಇನ್ನೂರು ಅಶ್ವ ಸೈನ್ಯವನ್ನೂ, ಆರುನೂರು ಪದಾತಿಗಳನ್ನೂ ಶೃಂಗೇರಿಯತ್ತ ಧಾವಿಸುವಂತೆ ಆಜ್ಞೆ ಮಾಡಿದನು. ವೀರಭದ್ರನ ದಳವಾಯಿ ದೇವರಾಯನು ಗುರುಗಳ ದರ್ಶನಮಾಡಿ ತಾವು ಶೌರ್ಯಸಾಹಸಗಳಿಂದ ಹೋರಾಡುತ್ತಿರುವುದಾಗಿಯೂ, ಭೈರವನೂ ಉಗ್ರವಾಗಿಯೇ ಹೋರಾಡುತ್ತಿರುವುದಾಗಿಯೂ, ಇನ್ನೂ ಉಗ್ರತರವಾದ ಕದನ ನಡೆಯಬಹುದೆಂದೂ, ಪರಿಣಾಮವನ್ನು ಹೇಳಲು ಸಾಧ್ಯವಾಗದಿದ್ದುದರಿಂದ, ಗುರುಗಳು ತಮ್ಮ ರಕ್ಷಣೆಗಾಗಿ ಶೃಂಗೇರಿಯನ್ನು ಬಿಟ್ಟು ಮರೆಯಾಗಿ ದೂರ ಎಲ್ಲಾದರೂ ಹೋಗಬೇಕೆಂದೂ ಕೇಳಿಕೊಂಡನು. ಅದಕ್ಕೆ ಸ್ವಾಮಿಗಳು ಒಪ್ಪಲಿಲ್ಲ. ಜನಕ್ಕೆ ಆದುದೇ ತಮಗೂ ಆಗಲೆಂದೂ, ಶ್ರೀ ಶಾರದಾಂಬೆಯ ರಕ್ಷಣೆಯಲ್ಲಿ ತಮಗೆ ಸಂಪೂರ್ಣ ಭರವಸೆ ಇರುವುದಾಗಿಯೂ ತಿಳಿಸಿದರು. ವೀರಭದ್ರನ ಸೈನ್ಯವು ಇಕ್ಕೇರಿಯಿಂದ ಬಂದು ಒದಗಿದ ಹೊಸ ಸಹಾಯದಿಂದ ಉತ್ತೇಜಿತವಾಗಿ ಭೈರವನ ಸೈನ್ಯವನ್ನು ದಕ್ಷತೆಯಿಂದ ಹಿಮ್ಮೆಟ್ಟಿಸುವ ಪ್ರಯತ್ನದಲ್ಲಿ ಯಶ ಪಡೆಯಿತು.

ಈ ಅನಿರೀಕ್ಷಿತವಾದ ತನ್ನ ಸೈನ್ಯದ ಹಿಮ್ಮೆಟ್ಟುವಿಕೆಯಿಂದ ಭೈರವನ ಕೋಪವು ಜ್ವಲಿಸಿತು. ಅವನ ದಳವಾಯಿ ಕಾಳನಾಯಕನು, ತಿರುವೆಂಕಟನ

Sri Vidyabharathi Book Centre, Sringeri

CC-O. In Public Domain. Digitized by eGangotri

ಮನಸ್ಸನ್ನು ಒಲಿಸಿ, ಅವನ ಸೈನ್ಯದೊಡನೆ ಶೃಂಗೇರಿಯನ್ನು ಪುನಃ ಮುತ್ತಿದನು. ಊರಿನ ಸುತ್ತಲೂ ಬಲವಾದ ಬೀಡುಬಿಟ್ಟು, ಹೊರಗಿನಿಂದ ಯಾವ ಸಹಾಯವೂ ಒಳಕ್ಕೆ ಬರದಂತೆ ತಡೆಹಾಕಿದರು. ಸೈನ್ಯದ ಇನ್ನೊಂದು ಭಾಗದವರು ಊರಿನೊಳಕ್ಕೆ ನುಗ್ಗಿ ಯುದ್ಧ ಮಾಡಲು ಸನ್ನದ್ಧರಾದರು. ಆ ವೇಳೆಗೆ ಸೂರ್ಯಾಸ್ತ ಸಮಯ ಸನ್ನಿಹಿತವಾಗಿತ್ತು. ಇಕ್ಕೇರಿಯ ಸೈನ್ಯ ಹೆಚ್ಚಾಗಿ ಊರಿನೊಳಗೇ ಇದ್ದು, ಮಲ್ಲಪ್ಪನ ಬೆಟ್ಟದ ಆಯಕಟ್ಟಾದ ಸ್ಥಳದಲ್ಲಿ ಬೆಳಗಿನ ಯುದ್ಧಕ್ಕಾಗಿ ಎದುರುನೋಡುತ್ತ ಸನ್ನದ್ಧವಾಗಿದ್ದಿತು.

ಮಾರನೆಯ ಬೆಳಿಗ್ಗೆ ವಿಸ್ಮಯ ಕಾದಿತ್ತು. ಭೈರವನ ಸೈನಿಕರಾಗಲೀ, ತಿರುವೆಂಕಟನ ಸೈನಿಕರಾಗಲಿ ಯಾರೂ, ಊರಿನ ಒಳಗಾಗಲಿ ಹೊರಗಾಗಲಿ, ಕಾಣಲಿಲ್ಲ. ಮುರಿದು ಬಿದ್ದಿದ್ದ ಕೋಟೆಯ ಆಚೆಗೂ ಸೈನ್ಯದ ಸುಳಿವು ಕಾಣಲಿಲ್ಲ. ಸೈನಿಕರೆಲ್ಲರೂ ತಮ್ಮ ನಾಯಕರಿಗೆ ಹೇಳದೇ ಕೇಳದೇ ಪಲಾಯನ ಮಾಡಿದ್ದರು. ಯುದ್ಧ ಪ್ರಾರಂಭವಾಗಿದ್ದಂದಿನಿಂದ ಉಗ್ರಉಪಾಸನೆಯಲ್ಲಿ ಮಗ್ನರಾಗಿದ್ದ ಶ್ರೀ ಗುರುಗಳಿಗೆ ಆ ರಾತ್ರಿಯಲ್ಲಿ ಸ್ವಪ್ನವಾಗಿ ಊರಿನ ರಕ್ಷಕ ದೇವತೆಗಳಾದ ದುರ್ಗ, ಕಾಳಿ, ಕಾಲಭೈರವ ಮತ್ತು ಆಂಜನೇಯರು ಕಾಣಿಸಿಕೊಂಡು, ತಾವು ಶತ್ರುಗಳನ್ನು ಸೋಲಿಸಿ ಓಡಿಸಿರುವುದಾಗಿಯೂ ತಮ್ಮ ಶರೀರವೆಲ್ಲ ಅಸ್ತ್ರಾಘಾತದಿಂದ ಗಾಯಗಳಾಗಿರುವುದಾಗಿಯೂ ಹೇಳಿದಂತೆ ಭಾಸವಾಯಿತು. ಸ್ವಪ್ನದಿಂದ ಎಚ್ಚೆತ್ತ ಸ್ವಾಮಿಗಳು ಬಾಷ್ಪಲೋಚನರಾಗಿ, ತಮ್ಮ ಪ್ರಾರ್ಥನೆಯು ಕೈಗೂಡಿದುದಕ್ಕೆ ಆನಂದತುಂದಿಲರಾಗಿ ಶ್ರೀ ಶಾರದಾ ದೇವಾಲಯಕ್ಕೆ ಹೋಗಿ, ಅಮ್ಮನವರ ಮುಂದೆ ನಿಂತು ಕ್ಷಣಕಾಲ ಭಾವಾವಿಷ್ಟರಾಗಿದ್ದು, ಅನಂತರ ಅನೇಕ ವಿಧವಾಗಿ ಸ್ತೋತ್ರ ಗೈದು, ಅರ್ಚನೆ ಮಾಡಿಸಿದರು. ಶೃಂಗೇರಿಯ ನಾಲ್ಕು ಮೂಲೆಗಳಲ್ಲಿಯೂ ಇರುವ ರಕ್ಷಕ ದೇವತೆಗಳ ಆಲಯಗಳಲ್ಲಿಯೂ, ಇತರ ದೇವಾಲಯಗಳಲ್ಲಿಯೂ ವಿಶೇಷ ಪೂಜೆಗಳಾದುವು.

ಶತ್ರುಭೀತಿ ಸಂಪೂರ್ಣವಾಗಿ ನಿವಾರಣೆಯಾಯಿತು. ತಮ್ಮ ಸಹಾಯಕ್ಕಾಗಿ ಬಂದಿದ್ದ ವೀರಭದ್ರನ ದಳವಾಯಿ ಮತ್ತು ಸೈನಿಕರನ್ನೂ, ಶ್ರೀ ಗುರುಗಳೂ, ಊರಿನ ನಾಗರಿಕರೂ, ನಾನಾ ವಿಧವಾಗಿ ಸತ್ಕರಿಸಿ ಸನ್ಮಾನಿಸಿದರು. ದೇವಾಲಯಗಳಲ್ಲಿ ವಿಶೇಷ ಪೂಜೆಗಳು ನಡೆದವು. ಶೃಂಗೇರಿಯಲ್ಲಿ

CC-O. In Public Domain. Digitized by eGangotri

CC-O. In Public Domain. Digitized by eGangotri

ಶಾಂತಿನೆಲಸಿ ಜನ ಎಂದಿನಂತೆಯೇ ತಮ್ಮ ನಿತ್ಯದ ಕೆಲಸ ಕಾರ್ಯಗಳಲ್ಲಿ ನಿರತರಾದರು.

೧೦

ವೀರಭದ್ರನಾಯಕನ ಅನಂತರ, ೧೬೪೭ ಇಕ್ಕೇರಿಯ ಸಿಂಹಾಸನಕ್ಕೆ ಶಿವಪ್ಪನಾಯಕನು ಬಂದನು. ಈತನು ವಾವೆಯಲ್ಲಿ ವೀರಭದ್ರನ ಚಿಕ್ಕಪ್ಪನಾದರೂ, ಅವರಿಬ್ಬರಿಗೂ ಅಷ್ಟೊಂದು ಮೈತ್ರಿ ವಿಶ್ವಾಸಗಳು ಇರಲಿಲ್ಲ. ಹಾಗೆಯೇ ವೀರಭದ್ರನ ಅಜ್ಜ ವೆಂಕಟಪ್ಪನಲ್ಲಾಗಲೀ ಪ್ರೇಮಾದರ ಗಳಿರಲಿಲ್ಲ. ಅವರಿಬ್ಬರೂ ಶೃಂಗೇರಿಯ ಪೀಠಕ್ಕೆ ಅತ್ಯಂತ ಭಕ್ತಿಶ್ರದ್ಧೆಯಿಂದ ಸೇವೆಸಲ್ಲಿಸಿದಂತೆ, ಶಿವಪ್ಪನಾಯಕನು ನಡೆದುಕೊಳ್ಳುವನೋ ಇಲ್ಲವೋ, ಎಂದು ಶಂಕಿಸಿದ ಗುರುಗಳು ತಾವೇ ಸ್ವತಃ ಇಕ್ಕೇರಿಗೆ ಹೋಗಿ ಶಿವಪ್ಪನಾಯಕನನ್ನು ಕಂಡು ಆಶೀರ್ವದಿಸಿ ಬರುವುದೆಂದು ನಿರ್ಧರಿಸಿದರು. ಈ ವೇಳೆಗಾಗಲೇ ಇಕ್ಕೇರಿಯಿಂದ ರಾಜಧಾನಿಯು ಬಿದನೂರಿಗೆ ಬದಲಾಯಿಸಲ್ಪಟ್ಟಿದ್ದಿತು. ೧೬೫೯ರಲ್ಲಿ ಬಿಜಾಪುರದ ದಳಪತಿ ರಣದುಲ್ಲಾಖಾನನು ಇಕ್ಕೇರಿಯನ್ನು ಮುತ್ತಲು, ಆತನೊಡನೆ ಕಾದಿ, ದಣಿದ ವೀರಭದ್ರನು ಇಕ್ಕೇರಿಯನ್ನೂ ರಾಜ್ಯದ ಸ್ವಲ್ಪಭಾಗವನ್ನೂ ಅವನಿಗೆ ಸೋತು, ತಾನು ಬಿದನೂರಿಗೆ–ನಗರ–ಹೋಗಿ ಅಲ್ಲಿಂದಲೇ ರಾಜ್ಯಭಾರಮಾಡುತ್ತಿದ್ದನು.

ಅನಿರೀಕ್ಷಿತ ಪ್ರಯಾಣವಾದರೂ ಸಾಕಷ್ಟು ಪರಿವಾರ, ಬಿರುದು ಬಾವಲಿಗಳೊಡನೆ ಹೊರಟ ಗುರುಗಳು, ಬಿದನೂರನ್ನು ಮೆರಣಿಗೆಯಲ್ಲಿಯೇ ಪ್ರವೇಶಮಾಡಿ ಅರಮನೆಯ ಮುಂದೆಯೇ ಬಿಜಮಾಡಿಸಿ ಶ್ರೀ ನೀಲಕಂಠೇಶ್ವರ ದೇವಾಲಯದಲ್ಲಿ ಬಿಡಾರಮಾಡಿದರು. (೧೬೫೨ ರಲ್ಲಿ ಇರಬಹುದು). ಇದ್ದಕ್ಕಿದಂತೆಯೇ ಪೂರ್ವವರ್ತಮಾನವನ್ನು ಕೊಡದೆ ಬಿದನೂರಿಗೆ ದಯಮಾಡಿಸಿದ ಗುರುಗಳನ್ನು ಶಿವಪ್ಪನಾಯಕನು ದೇವಾಲಯದಲ್ಲಿಯೇ ದರ್ಶನಮಾಡಿ, ಯೋಗಕ್ಷೇಮಾದಿಗಳನ್ನು ವಿಚಾರಿಸಿದನು. ಗುರುಗಳನ್ನು ಅರಮನೆಗೆ ದಯಮಾಡಿಸಿ, ತನ್ನನ್ನು ಆಶೀರ್ವದಿಸಬೇಕೆಂದು ವಿನಯದಿಂದ ಕೇಳಿಕೊಂಡನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಸಕಲ ರಾಜಮರ್ಯಾದೆಗಳಿಂದ ಆರಮನೆಗೆ ದಯವಾಡಿಸಿದ ಗುರುಗಳನ್ನು ರಾಜದ್ವಾರದಲ್ಲಿಯೇ ಅರಸನು ಸ್ವಾಗತಿಸಿ ತನ್ನ ಹಿಂದಿನ ದೊರೆಗಳಂತೆಯೇ ಭಕ್ತಿಶ್ರದ್ಧೆಗಳಿಂದ ನಡೆದುಕೊಂಡನು. ದೊರೆಯು ಪಾದ ಪೂಜೆಗಳನ್ನು ನಡೆಸಿ ಗುರುಗಳಿಗೆ ಖಿಲ್ಲತನ್ನು ಒಪ್ಪಿಸಿ, ಅವರಿಂದ ಆಶೀರ್ವಾದವನ್ನೂ ಪ್ರಸಾದವನ್ನೂ ಪಡೆದನು. ಹಲವಾರು ದಿನಗಳು ಬಿದನೂರಿನಲ್ಲಿಯೇ ಇದ್ದ ಗುರುಗಳು, ಅರಸನಿಂದ ಬಹುವಾಗಿ ಸತ್ಕರಿಸಲ್ಪಟ್ಟು ಶೃಂಗೇರಿಗೆ ಹಿಂದಿರುಗಿದರು. ಅರಸನು ತನ್ನ ಪೂರ್ವದ ದೊರೆಗಳಂತೆಯೇ ತಾನೂ ಕೂಡ ಗುರುಗಳ ಸೇವೆಗೆ ಸದಾಸಿದ್ಧವೆಂದು ಶ್ರುತಪಡಿಸಲು, ಗುರುಗಳು ಸಂತೋಷದಿಂದ ಹಿಂದಿರುಗಿದರು.

ಶೃಂಗೇರಿಗೆ ಹಿಂದಿರುಗಿದ ಗುರುಗಳು ಮಠದ ಆಡಳಿತವನ್ನು ಸರಿಪಡಿಸುವುದರಲ್ಲಿಯೂ, ಆಸ್ತಿಪಾಸ್ತಿಗಳ ಸೂಕ್ತವ್ಯವಸ್ಥೆಗಾಗಿಯೂ ಕೆಲಸ ವಾರಂಭಿಸಿದರು. ಈ ಕಾರ್ಯದಲ್ಲಿ ಶಿವಪ್ಪನಾಯಕನು ಮಠಕ್ಕೆ ತುಂಬಾ ಸಹಾಯವಾಡಿದನು. ಮಠವು ಹಲವಾರು ವರ್ಷಗಳಿಂದ ತುಂಬಾ ನಷ್ಟಕ್ಕೆ ಒಳಗಾಗಿದ್ದು ಅದರ ಆಸ್ತಿಪಾಸ್ತಿಗಳೆಲ್ಲವೂ ಅನ್ಯಾಕ್ರಾಂತವಾಗಿದ್ದುವು. ಶಿವಪ್ಪನಾಯಕನು ಅವೆಲ್ಲವನ್ನೂ ವಿಚಾರಿಸಿ ಪುನಃ ಮಠಕ್ಕೇ ವಾಪಸುಕೊಡಿಸಿದನು.[14] ಮಂಗಳೂರು ಪ್ರಾಂತ್ಯದಲ್ಲಿದ್ದ ಶೃಂಗೇರಿಯ ಮಠದ ಭೂಮಿಕಾಣಿಕೆಗಳ ಗುತ್ತಿಗೆ, ವಾರ ಮುಂತಾದುವನ್ನು ಕೊಡದಿದ್ದವರ ವಿಚಾರಣೆ ನಡೆಸಿ, ಮಠಕ್ಕೆ ದ್ರೋಹವಾಡಿದವರಿಗೆ ಉಗ್ರವಾದ ಶಿಕ್ಷೆ ವಿಧಿಸುವುದಾಗಿ ಆಜ್ಞೆಮಾಡಿದನು.

ವಿದ್ಯಾರಣ್ಯಪುರದಲ್ಲಿ ನಿರ್ಮಾಣವಾಗುತ್ತಿದ್ದ ಸದಾಶಿವದೇವಾಲಯವನ್ನು ಶೀಘ್ರವಾಗಿ ಪೂರೈಸಬೇಕೆಂದು ಆಜ್ಞೆಮಾಡಿದ ಶಿವಪ್ಪನಾಯಕನು, ತಿರುಮಲಭಟ್ಟರೆಂಬುವರಿಗೆ ಪತ್ರಬರೆದು, ದೇವಾಲಯಗಳ ದುರಾಡಳಿತ, ಧರ್ಮದತ್ತಿಗಳ ಅವ್ಯವಸ್ಥೆ, ಅಗ್ರಹಾರಗಳ ಅಶುಚಿಯಾದ ವಾತಾವರಣ, ದಾನಧರ್ಮಗಳ ಪತ್ರಗಳನ್ನು ಹೊಸದಾಗಿ ನಕಲು ಮಾಡಿರುವುದು ಮುಂತಾದ ವಿಷಯಗಳನ್ನು ಕುರಿತು ಅಸಮಾಧಾನವನ್ನು ಸೂಚಿಸಿ ಎಲ್ಲವನ್ನೂ ಸರಿಪಡಿಸಬೇಕೆಂದೂ ಆಜ್ಞೆಮಾಡಿದನು. ಅಳಿಯ ಕೆಂಡಣ್ಣನಿಗೆ ಪತ್ರ ಬರೆದು,

14. ಶೃಂ. ಶ. ೧೧೧೨

Sri Vidyabharathi Book Centre, Sringeri

CC-O. In Public Domain. Digitized by eGangotri

ಮುಂಗಳೂರು ಪ್ರಾಂತದಲ್ಲಿದ್ದ ರೈತರು ಶೃಂಗೇರೀ ಮಠಕ್ಕೆ ಕೊಡಬೇಕಾದ ಗುತ್ತಿಗೆಯನ್ನು ಸರಿಯಾಗಿ ಕೊಡುತ್ತಿಲ್ಲವೆಂಬುದು ತನ್ನ ಗಮನಕ್ಕೆ ಬಂದಿದೆಯೆಂದೂ, ಕೆಂಡಣ್ಣನು ಆ ರೈತರ ಮೇಲೆ ಸೂಕ್ತವಾದ ಕ್ರಮ ಜರುಗಿಸಿ, ಮಠಕ್ಕೆ ಸಲ್ಲಬೇಕಾದುದನ್ನು ಕೊಡಿಸಬೇಕೆಂದೂ ಆಜ್ಞೆಮಾಡಿದನು.

ವೆಂಗಂಭಟ್ಟ ಎಂಬುವರಿಗೆ ಪತ್ರ ಬರೆದು ಕಾರ್ಕಳದಿಂದ ಶೃಂಗೇರಿಗೆ ಹೊರಟುಹೋಗಿದ್ದ ಒಕ್ಕಲುಗಳನ್ನು ಪುನಃ ಕಾರ್ಕಳಕ್ಕೇ ಕಳಿಸಬೇಕೆಂದು ತಿಳಿಸಿದ್ದನು[15]. ವಾರಸುದಾರರಿಲ್ಲದ ಭೂದಾನದ ವೃತ್ತಿಗಳನ್ನು ಬೇರೆಯವರಿಗೆ ಹಂಚಿಕೊಟ್ಟನು.[16] ಸುಮಾರು ನೂರಿಪ್ಪತ್ತು ಪಗೋಡಗಳಿಗಿಂತಲೂ ಹೆಚ್ಚು ಉತ್ಪನ್ನ ಬರುವ ಭೂಮಿಯನ್ನು ಹೊಳೆಹೊನ್ನೂರಿನಲ್ಲಿ ಮಠಕ್ಕೆ ದಾನ ಮಾಡಿದನು.[17]

ಶ್ರೀ ಗುರುಗಳು ಈ ಸಮಯದಲ್ಲಿ ದಕ್ಷನೂ ಸಮರ್ಥನೂ ಆದ ಈ ದೊರೆಯ ಸಹಾಯ ಸಹಕಾರಗಳಿಂದ, ಮರದ ಜಮೀನುಗಳನ್ನು ಪುನಃ ಸರ್ವೆಮಾಡಿಸಿ, ಬೇರೀಜನ್ನು ನಿಗದಿ ಮಾಡಿಸಿದರು. ಸಂಸ್ಥಾನಕ್ಕೆ ಸೇರಬೇಕಾದುದು ಹನ್ನೆರಡು ಸಾವಿರ ಪಗೋಡಗಳೆಂದು ನಿರ್ಧರಿಸಲ್ಪಟ್ಟು ಪ್ರತಿ ವೃತ್ತಿದಾರನಿಗೂ ಎಷ್ಟೆಷ್ಟು ಗದ್ದೆ, ತೋಟ ಮತ್ತು ಹೊಲಗಳು ಇರಬೇಕೆಂದು ನಿರ್ಧರಿಸಲಾಯಿತು. ವೃತ್ತಿದಾರನಿಗೆ ನಲವತ್ತು ಖಂಡುಗ ಬತ್ತ ಕೊಡಬೇಕೆಂದು ಲಿಖಿತವಾಯಿತು. ಶಿವಪ್ಪನಾಯಕನ ಈ ತೀರ್ಮಾನದಿಂದ ಇನಾಮದಾರರ ಮತ್ತು ರೈತರ ಹಕ್ಕುಭಾದ್ಯತೆಗಳು ಏನು ಎಂಬುದು ನಿಷ್ಕರ್ಷಿಸಲ್ಪಟ್ಟು, ರೈತರೂ ಮತ್ತು ಇನಾಮದಾರರೂ ಎಷ್ಟೆಷ್ಟು ಧಾನ್ಯ ಅಥವ ಹಣವನ್ನು ಮಠಕ್ಕೆ ಕೊಡಬೇಕೆಂದೂ ವಿಶದೀಕರಿಸಲ್ಪಟ್ಟು ಎಲ್ಲ ವಿಷಯಗಳಲ್ಲೂ ಮಠದ್ದೇ ಪರಮಾಧಿಕಾರವೆಂದೂ ಶ್ರುತಪಡಿಸಲ್ಪಟ್ಟಿತು.

ಹಿಂದಿನ ಒಪ್ಪಂದ ಮತ್ತು ರಾಜಾಜ್ಞೆಗಳಿಗೆ ವಿರುದ್ಧವಾಗಿ ಎಲ್ಲೆಲ್ಲಿ ಗದ್ದೆಗಳೆಲ್ಲವೂ ಅಡಕೆತೋಟಗಳಾಗಿ ಪರಿವರ್ತಿಸಲ್ಪಟ್ಟಿದ್ದುವೋ ಅವೆಲ್ಲವೂ

---

15. MAR 1916-p. 65.
16. ಶೃಂ.ಶಾ. 13.
17. ಶೃಂ.ಶಾ. 13-1660-61.

Sri Vidyabharathi Book Centre, Sringeri

CC-O. In Public Domain. Digitized by eGangotri

ಕಡ್ತಾಯವಾಗಿ ಪುನಃ ಗದ್ದೆಗಳಾಗಿಯೇ ಮಾರ್ಪಡಿಸಲ್ಪಟ್ಟುವು. ಹಲವು ಕಡೆ ರೈತರು ನ್ಯಾಯ ವಿರುದ್ಧವಾಗಿ ಗದ್ದೆಗಳನ್ನು ತೋಟಗಳಾಗಿ ಪರಿವರ್ತಿಸಿದುದರಿಂದ ಒಪ್ಪಂದದಂತೆ ಗುತ್ತಿಗೆಯನ್ನು ವೃತ್ತಿದಾರರಿಗೆ ಕೊಡದುದರಿಂದ, ವೃತ್ತಿದಾರರು ಜೀವನಕ್ಕೆ ಮಾರ್ಗ ಕಾಣದೆ ಊರುಬಿಟ್ಟೇ ಹೊರಟು ಹೋಗಿದ್ದರು. ಹೀಗಾಗಿ ವಿದ್ಯಾರಣ್ಯಪುರ ಅಗ್ರಹಾರವು ಪಾಳುಬಿದ್ದಿತ್ತು. ಶಿವಪ್ಪನಾಯಕನು ಆ ರೈತರೆಲ್ಲರಿಗೂ ತೀಕ್ಷ್ಣವಾದ ಎಚ್ಚರಿಕೆ ಕೊಟ್ಟು, ಅಗ್ರಹಾರವನ್ನು ಪುನಃ ನಿರ್ಮಾಣಮಾಡಿಸಿ, ಬ್ರಾಹ್ಮಣರಿಗೆಲ್ಲಾ ಸೂಕ್ತ ಪರಿಹಾರ ನೀಡಿದನು.[18]

ಮಠದ ಆಸ್ತಿಪಾಸ್ತಿಗಳ ವಹಿವಾಟು ವ್ಯವಸ್ಥೆಗೆ ಬಂದು, ಆಡಳಿತವು ಸುಸೂತ್ರವಾಗಿ ನಡೆಯುವಾರಂಭಿಸಿದನಂತರ, ಶ್ರೀ ಗುರುಗಳು ಇತರ ಪ್ರಗತಿಯ ಕಾರ್ಯಗಳನ್ನು ಕೈಗೊಂಡರು.

ಬೆಟ್ಟದಮಲ್ಲ ಹಾನಿಕರೇಶ್ವರ ದೇವಾಲಯದಲ್ಲಿ ಅಮ್ಮನವರ ಸನ್ನಿಧಿಯು ಇರಲಿಲ್ಲ. ಅದನ್ನು ಗಮನಿಸಿದ್ದ ಗುರುಗಳು ಶ್ರೀ ಸ್ವಾಮಿಯವರ ವಾಮಪಾರ್ಶ್ವದಲ್ಲಿ ಸಣ್ಣ ಆಲಯವನ್ನು ಕಟ್ಟಿಸಿ, ಅಲ್ಲಿ ಶ್ರೀ ಚಕ್ರಸ್ಥಾಪನೆ ಮಾಡಿ, ಶ್ರೀ ಭವಾನೀ ದೇವಿಯನ್ನು ಪ್ರತಿಷ್ಠೆಮಾಡಿದರು. ಅಲ್ಲಿ ಪ್ರತಿ ವರ್ಷವೂ ಗಿರಿಜಾಕಲ್ಯಾಣ ಮತ್ತು ರಥೋತ್ಸವಗಳು ನಡೆಯುವಂತೆ ಏರ್ಪಾಡು ಮಾಡಿದರು. ಆ ಸಂದರ್ಭಗಳಲ್ಲಿ ಪಠಿಸಬೇಕಾದ ಮತ್ತು ಹಾಡಬೇಕಾದ ಸ್ತೋತ್ರ ಮತ್ತು ಗೀತೆಗಳನ್ನು ತಾವೇ ಸ್ವತಃ ರಚಿಸಿದರು.

ಈ ಗುರುಗಳ ಪ್ರೋತ್ಸಾಹದಿಂದ ೧೬೫೨ ರಲ್ಲಿ ಹೊನ್ನೆಯ ಶ್ರೀ ವಿಶ್ವೇಶ್ವರ ದೇವಾಲಯವೂ,[19] ಆನೆಗುಂದದ ಗೋಪಾಲಕೃಷ್ಣ ದೇವಾಲಯವೂ[20] ನಿರ್ಮಿಸಲ್ಪಟ್ಟವು.

ಶ್ರೀ ಗುರುಗಳನ್ನು ಶಿವಪ್ಪನಾಯಕನು ಮತ್ತೊಮ್ಮೆ ಬಿದನೂರಿಗೆ ಬರಮಾಡಿಕೊಂಡು ಸ್ವಲ್ಪಕಾಲ ಅಲ್ಲಿಯೇ ಉಳಿಸಿಕೊಂಡಿದ್ದನು. ಆ

---

18. MAR 1925, No. 35.

19. ಶೃಂ.ಶಾ. 9.

20. ಶೃಂ.ಶಾ. 24.

Sri Vidyabharathi Book Centre, Sringeri

 CC-O. In Public Domain. Digitized by eGangotri

ಸಮಯದಲ್ಲಿ ಅವರಿಂದ ಧರ್ಮ ಮತ್ತು ರಾಜನೀತಿಯ ಉಪದೇಶ ಪಡೆದನು. ಆ ಸಮಯದಲ್ಲಿ ಕೂಡಲೀ ಮಠವೂ ಅದರ ಆಸ್ತಿಪಾಸ್ತಿಗಳೂ ಬೇರೆಯವರಿಂದ ಅಪಹರಿಸಲ್ಪಟ್ಟಿರಲು, ಅವೆಲ್ಲವನ್ನೂ ಶಿವಪ್ಪನಾಯಕನು ಬಿಡಿಸಿಕೊಂಡು ಶ್ರೀ ಶೃಂಗೇರೀ ಗುರುಗಳಿಗೆ ಒಪ್ಪಿಸಿದನು.[21] ಶ್ರೀ ಗುರುಗಳು ಕೂಡಲಿಗೆ ಪ್ರಯಾಣ ಬೆಳಸಿ, ಅಲ್ಲಿಯ ಮಠದ ಆಡಳಿತವನ್ನು ವ್ಯವಸ್ಥೆಗೊಳಿಸಿ, ಶ್ರೀ ಶಂಕರ ಭಾರತೀ ಎಂಬೊಬ್ಬ ಶಿಷ್ಯ ಸನ್ಯಾಸಿಯನ್ನು ಆ ಮಠಕ್ಕೆ ಪೀಠಾಧಿಕಾರಿಯಾಗಿ ನೇಮಿಸಿದರು. ಶ್ರೀ ಗುರುಗಳು ಸ್ವಲ್ಪಕಾಲ ಅಲ್ಲಿಯೇ ಇದ್ದು, ೧೬೬೦ ರಲ್ಲಿ, ಶ್ರೀರಾಮೇಶ್ವರ ದೇವಾಲಯವನ್ನು ನಿರ್ಮಾಣಮಾಡಿಸಿ, ಮೂರ್ತಿಪ್ರತಿಷ್ಠೆಯನ್ನು ಮಾಡಿ ಕುಂಭಾಭಿಷೇಕವನ್ನು ನಡೆಸಿದರು.[22]

೧೧

ಶಿಷ್ಟನ ಶಿವಪ್ಪನಾಯಕನ ನಿಧನಾನಂತರ ಅವನ ಅನುಜನಾದ ಎರಡನೆಯ ವೆಂಕಟಪ್ಪನಾಯಕನು ೧೬೬೦ ರಲ್ಲಿ ಬಿದನೂರಿನ ಸಿಂಹಾಸನವನ್ನೇರಿದನು. ಆತನ ಆಳ್ವಿಕೆ ಕೇವಲ ಒಂದು ವರ್ಷ ಮಾತ್ರ ನಡೆಯಿತು.[23] ಅವನ ನಂತರ ಶಿವಪ್ಪನಾಯಕನ ಮಗ ಭದ್ರಪ್ಪನಾಯಕನು ಪಟ್ಟಕ್ಕೆ ಬಂದನು.

ಈ ಇಬ್ಬರು ನಾಯಕರೂ ತಮ್ಮ ಪೂರ್ವಜರಂತೆಯೇ ಶೃಂಗೇರೀ ಪೀಠಕ್ಕೆ ಭಕ್ತಿಗೌರವಗಳಿಂದ ನಡೆದುಕೊಂಡರು. ಕೆರೆಹಳ್ಳಿ ಮತ್ತು ಗವಟೂರು ಗ್ರಾಮಗಳಲ್ಲಿದ್ದ ಮಠದ ಸ್ವತ್ತುಗಳು ಸರ್ಕಾರಕ್ಕೆ ಸೇರಿಬಿಟ್ಟಿದ್ದುದನ್ನು ಗಮನಿಸಿದ್ದ ಭದ್ರಪ್ಪನಾಯಕನು ೧೬೬೨ ರಲ್ಲಿ, ಗುರುಗಳು ಬಿದನೂರಿಗೆ ಭೇಟಿಯಿತ್ತಿದ್ದ ಸಂದರ್ಭದಲ್ಲಿ ಶೃಂಗೇರೀಮಠಕ್ಕೇ ಪುನಃ

---

21. MAR 1916—page 66

22. S.B.S. page 31

23. ಈತನು ಬೆಟ್ಟಜಟ್ಟಿ ಎಂಬುವನಿಂದ ಕೊಲೆಯಾದನು. ಕೆ. ನೃ. ವಿ. ಪುಟ 117.

Sri Vidyabharathi Book Centre, Sringeri

CC-0. In Public Domain. Digitized by eGangotri

ಒಪ್ಪಿಸಿದನು.[24] ಶೃಂಗೇರಿಯ ಗುರುಗಳನ್ನು ಗೌರವಿಸುವುದರಲ್ಲಿ ಕೆಳದಿಯ ನಾಯಕರಷ್ಟೇ ಅಲ್ಲದೆ ತರೀಕೆರೆಯ ಹನುಮಪ್ಪನಾಯಕನೂ, ನೈಸೂರಿನ ದೊರೆ ನರಸರಾಜ ಒಡೆಯರೂ ಪ್ರಮುಖರಾಗಿದ್ದರು. ಹನುಮಪ್ಪನಾಯಕನು ದೇವಪುರ ಮತ್ತು ದಂಡೂರು ಗ್ರಾಮಗಳನ್ನು ಶ್ರೀ ಸಚ್ಚಿದಾನಂದಭಾರತಿ ಗಳವರಿಗೆ ಒಪ್ಪಿಸಿದನು. ನರಸರಾಜ ಒಡೆಯರು ಅಮೂಲ್ಯವಾದ ರತ್ನಾಭರಣಗಳನ್ನು ದೇವಮೂರ್ತಿಗಳನ್ನೂ ಗುರುಗಳಿಗೆ ಕಳಿಸಿದ್ದರು.[25]

೧೬೫೯ ರಲ್ಲಿ ಬಿಜಾಪುರದ ಸೇನಾಧಿಪತಿ ರಣದುಲ್ಲಾಖಾನನು ತನ್ನ ಅಪರಿಮಿತವಾದ ಸೈನ್ಯದೊಡನೆ ದಕ್ಷಿಣದತ್ತ ದಂಡಯಾತ್ರೆ ಹೊರಟಿದ್ದನು. ಅವನ ಮುಖ್ಯ ಸಹಾಯಕಾಧಿಕಾರಿಯಾಗಿ ಶಿವಾಜಿ ಮಹಾರಾಜನ ತಂದೆ ಷಹಜಿಯು ಇದ್ದನು. ೧೬೫೯ ರಲ್ಲಿ ಷಹಜಿಯು ಇಕ್ಕೇರಿಯನ್ನು ಮುತ್ತಿಗೆ ಹಾಕಲು, ವೀರಭದ್ರನಾಯಕನು ತನ್ನ ರಾಜಧಾನಿಯನ್ನೂ ಅರ್ಧದಷ್ಟು ರಾಜ್ಯವನ್ನೂ ಆತನಿಗೆ ಸೋತುಬಿಟ್ಟನು. ಅಂದಿನಿಂದ ವೀರಭದ್ರನಾಯಕನು ತನ್ನ ರಾಜಧಾನಿಯನ್ನು ಬಿದನೂರಿನಲ್ಲಿ ಸ್ಥಾಪಿಸಿಕೊಂಡು ಅಲ್ಲಿಂದಲೇ ಆಡಳಿತ ನಡೆಸುತ್ತಿದ್ದನು.

ಈ ರಾಜಕೀಯ ಕ್ಷೋಭೆಯಿಂದ ತಮ್ಮ ಧರ್ಮಪೀಠಕ್ಕೆ ಆಗಬಹುದಾದ ತೊಂದರೆಗಳನ್ನು ಮುಂದಾಲೋಚಿಸಿದ ಶ್ರೀ ಸಚ್ಚಿದಾನಂದ ಭಾರತಿಯವರು ರಣದುಲ್ಲಾಖಾನನಿಗೆ ಮಠದ ಆಸ್ತಿಪಾಸ್ತಿಗಳ ರಕ್ಷಣೆಗೆ ಯೋಗ್ಯ ವ್ಯವಸ್ಥೆ ಮಾಡಬೇಕೆಂದು ಶ್ರೀಮುಖ ಕಳಿಸಿದ್ದರು. ಆ ಶ್ರೀಮುಖಕ್ಕೆ ಪ್ರತಿಯಾಗಿ ರಣದುಲ್ಲಾಖಾನನು ಸನ್ನದ್ದು ಹೊರಡಿಸಿ, ಶಿವಮೊಗ್ಗೆಯಲ್ಲಿದ್ದ ತನ ಅಧಿಕಾರಿಗಳಿಗೆ ಅನ್ಯಾಕ್ರಾಂತವಾಗಿದ್ದ ಮಠದ ಆಸ್ತಿ ಪಾಸ್ತಿಗಳೆಲ್ಲವನ್ನೂ ಮಠಕ್ಕೆ ಕೂಡಲೇ ಹಿಂತಿರುಗಿಸುವ ವ್ಯವಸ್ಥೆ ಮಾಡುವಂತೆ ಆಜ್ಞೆ ಮಾಡಿದನು. ಶ್ರೀ ಗುರುಗಳಿಗೆ ಬರೆದ ವಿಜ್ಞಾಪನಾ ಪತ್ರದಲ್ಲಿ "ಪರಮಹಂಸ ಪರಿವ್ರಾಜಕಾಚಾರ್ಯರಾದ ಸಚ್ಚಿದಾನಂದ ಭಾರತೀ ಸ್ವಾಮಿಗಳವರ ಪವಿತ್ರ ಚರಣಗಳಿಗೆ ನನ್ನ ಸಲಾಮುಗಳು" ಎಂದು ಗೌರವಪೂರ್ವಕವಾಗಿ

---

24. ಶೃಂಪಾ. 16 : MAR 1916 page 67

25. T.T.W. page 51

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಬೋಧನೆ ಮಾಡಿ, ಮಠಕ್ಕೆ ಅಗತ್ಯವಾದ ಸಹಕಾರವನ್ನು ಕೊಡಲು ತಾನು ಸಿದ್ಧನಾಗಿರುವುದಾಗಿ ವಿಜ್ಞಾಪ್ತಿಮಾಡಿದ್ದನು[26].

ಶ್ರೀ ಸಚ್ಚಿದಾನಂದ ಭಾರತೀ ಸ್ವಾಮಿಗಳವರು ಕೇವಲ ಬಾಲ್ಯದಲ್ಲಿಯೇ ಪೀಠಾರೋಹಣ ಮಾಡಿದರು. ಆಗ ಅವರಿಗೆ ಇನ್ನೂ ಹದಿನಾರು ವರ್ಷ ವಯಸ್ಸು. ಅವರ ಗುರುಗಳು ಶಿಷ್ಯರನ್ನು ಪೂರ್ಣ ತಯಾರು ಮಾಡುವ ಮೊದಲೇ ವಿದೇಹ ಕೈವಲ್ಯ ಪಡೆದಿದ್ದರು. ಶ್ರೀ ಗುರುಗಳು ತಮ್ಮ ಹದಿನೇಳನೇ ವಯಸ್ಸಿನಿಂದ ಹಿಡಿದು ಸುಮಾರು ಆರು ಏಳು ವರ್ಷಗಳ ಕಾಲ ಸತತವಾಗಿ ಕಷ್ಟಪರಂಪರೆಯಲ್ಲಿ ಸಿಲುಕಿದ್ದ ಶೃಂಗೇರಿಯನ್ನು ರಕ್ಷಿಸಿ, ಮಠದ ಕೈಬಿಟ್ಟುಹೋಗಿದ್ದ ಆಸ್ತಿಪಾಸ್ತಿಗಳನ್ನು ಪುನಃ ಸಂಪಾದಿಸಿದರು; ಮಠವನ್ನು ನಾನಾ ರೀತಿಗಳಲ್ಲಿ ವೃದ್ಧಿಪಡಿಸಿ ಭದ್ರವಾದ ಅವರ ಅಡಿಗಲ್ಲನ್ನು ಇನ್ನೂ ಭದ್ರಪಡಿಸಿದರು.

ಶ್ರೀ ಗುರುಗಳವರು ತಮಿಳು ದೇಶದವರು. ಶ್ರೇಷ್ಠವಾದ ವಂಶಕ್ಕೆ ಸೇರಿದವರಾಗಿ, ವೇದಾಧ್ಯಯನ ಸಂಪನ್ನರಾಗಿದ್ದರು. ಅವರು ಶೃಂಗೇರಿಗೆ ಬಂದುದು ಸಾಧಾರಣವಾದ ಸಾಮಾನ್ಯವಾಗಿ ಎಲ್ಲರೂ ಹೊಂದಿರುವ ಲೌಕಿಕ ಉದ್ದೇಶದಿಂದ. ಆದರೆ ವಿಧಿ ಅವರನ್ನು ಬೇರೊಂದು ಮಹತ್ಕಾರ್ಯಕ್ಕಾಗಿ ಅಣಿಮಾಡಿತ್ತು. ಅದನ್ನು ಪೂರ್ಣವಾಗಿ ಗುರುತಿಸಿದ್ದ ಆವರ ಗುರುಗಳಾಗಿದ್ದ ಶ್ರೀ ಅಭಿನವ ನರಸಿಂಹ ಭಾರತೀ ಸ್ವಾಮಿಗಳು ಅವರಿಗೆ ಸನ್ಯಾಸ ದೀಕ್ಷೆಯನ್ನಿತ್ತರು. ಅನಂತರ ನಡೆದುದು ಚರಿತಾರ್ಹವಾದ ಘಟನಾ ಪರಂಪರೆ.

ಶ್ರೀ ಗುರುಗಳು ತಮ್ಮ ಉದ್ದೇಶ ಸಾಧನೆಯಾದನಂತರ, ಧ್ಯಾನ ಉಪಾಸನೆಗಳಲ್ಲಿ ಮಗ್ನರಾಗಿದ್ದು, ಅರ್ಹರೂ ಯೋಗ್ಯರೂ ಆದವರಿಗೆ ಉಪದೇಶಮಾಡುತ್ತ ಶ್ರೀ ಶಾರದಾ ಚಂದ್ರಮೌಳೀಶ್ವರರ ಅನುಗ್ರಹವನ್ನು ಬೀರುತ್ತ ೧೯೬೩ ರಲ್ಲಿ (೧೮೮೫-೨-೧೯೬೩) ವಿದೇಹ ಕೈವಲ್ಯವನ್ನು ಪಡೆದರು. ಅವರ ನಂತರ ಐದನೆಯ ಶ್ರೀ ನರಸಿಂಹ ಭಾರತಿಗಳವರು ಪೀಠಕ್ಕೆ ಬಿಜಯ ಮಾಡಿಸಿದರು.

ಶ್ರೀ ಸಚ್ಚಿದಾನಂದ ಭಾರತೀ ಸ್ವಾಮಿಗಳವರು ಸ್ವಯಂ ಕವಿಗಳಾ

---

26. MAR 1934, No. 33-Page 131.

Sri Vidyabharathi Book Centre, Sringeri

CC-O. In Public Domain. Digitized by eGangotri

ಗಿದ್ದು, ರಾಮಚಂದ್ರ ಮಹೋದಯ ಕಾವ್ಯವೆಂಬ ಮಹಾಕಾವ್ಯವನ್ನು, ಗುರುಸ್ತುತಿ, ವಿಶಾಲಾಕ್ಷೀಶತಕ, ಕೋವಿದಾಷ್ಟಕವೆಂಬ ಸ್ತೋತ್ರಗಳನ್ನು ರಚಿಸಿದ್ದಾರೆ. ಅಷ್ಟೇ ಅಲ್ಲದೆ, ತನ್ನ ದೈನಂದಿನ ಜಟುವಟಿಕೆಗಳ ಟಿಪ್ಪಣಿಯನ್ನೂ ಬರೆದಿಡುವ ಅಭ್ಯಾಸವೂ ಗುರುಗಳಿಗೆ ಇತ್ತು. ಅವರ ಆಧಾರದ ಮೇಲೆಯೇ ಅಜ್ಞಾತ ಕವಿಯೊಬ್ಬರು "ಶ್ರೀ ರಾಮಚಂದ್ರ ಮಹೋದಯ ಕಾವ್ಯಕರ್ತೃ ಸ್ವರೂಪ ದರ್ಶನಂ" ಎಂಬ ಕಾವ್ಯವೊಂದನ್ನು ಅವರ ನಂತರ ರಚಿಸಿದರು.

ಶೃಂಗೇರಿಯ ಪೀಠಕ್ಕೂ, ನಾಗರಿಕರಿಗೂ ಬಂದಿದ್ದಂತಹ ಕಷ್ಟಕಾಲವಲ್ಲಿ ಶ್ರೀ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮಿಗಳವರು ತೋರಿದ ಧೈರ್ಯ, ಸ್ಥೈರ್ಯ, ವಿವೇಕ ಮತ್ತು ಸಾಹಸಗಳು ಚಿರಸ್ಮರಣೀಯವಾಗಿವೆ. ಇತರರಿಗೆ ಮಾರ್ಗದರ್ಶಿಯಾಗಿವೆ.

ಓಂ ತತ್ಸತ್

Sri Vidyabharathi Book Centre, Sringeri

CC-O. In Public Domain. Digitized by eGangotri

ಶೃಂಗೇರೀ ಗುರುಪರಂಪರೆ ಪೀಠಾಧಿಪತ್ಯ

ಶ್ರೀ ರಾಮಚಂದ್ರಭಾರತೀ	೧೫೧೨ ರಿಂದ ೧೫೬೦
ಶ್ರೀ ತೃತೀಯ ನರಸಿಂಹಭಾರತೀ	೧೫೬೦ ರಿಂದ ೧೫೭೬
ಶ್ರೀ ಚತುರ್ಥ ನರಸಿಂಹಭಾರತೀ	೧೫೭೬ ರಿಂದ ೧೫೯೯
ಶ್ರೀ ಅಭಿನವ ನರಸಿಂಹಭಾರತೀ	೧೫೯೯ ರಿಂದ ೧೬೨೨
ಶ್ರೀ ಸಚ್ಚಿದಾನಂದಭಾರತೀ i	೧೬೨೨ ರಿಂದ ೧೬೬೩
ಶ್ರೀ ಐದನೆಯ ನರಸಿಂಹಭಾರತೀ	೧೬೬೩ ರಿಂದ ೧೭೦೫

T. T. W.

ಇಕ್ಕೇರಿಯ ರಾಜವಂಶ

ಚೌಡಪ್ಪನಾಯಕ	೧೫೦೮ ರಿಂದ ೧೫೪೦
ಸದಾಶಿವನಾಯಕ	೧೫೪೦ ರಿಂದ ೧೫೬೫
ದೊಡ್ಡಸಂಕಣ್ಣ	೧೫೬೬ ರಿಂದ ೧೫೭೧
ಚಿಕ್ಕಸಂಕಣ್ಣ	೧೫೭೧ ರಿಂದ ೧೫೮೦
ರಾಮರಾಜನಾಯಕ	೧೫೭೦ ರಿಂದ ೧೫೯೫
(ಈತನು ಚಿಕ್ಕು ಸಂಕ್ಕುಣ್ಣನೊಡನೆಯೇ ರಾಜ್ಯಭಾರ ಮಾಡುತ್ತಿದ್ದನು)	
ವೆಂಕಟಪ್ಪನಾಯಕ i	೧೫೯೬ ರಿಂದ ೧೬೨೯
ವೀರಭದ್ರ	೧೬೨೯ ರಿಂದ ೧೬೪೫
ಮೊದಲನೇ ಶಿವಪ್ಪನಾಯಕ	೧೬೪೫ ರಿಂದ ೧೬೭೦
ವೆಂಕಟಪ್ಪ ii	೧೬೭೦ ರಿಂದ ೧೬೭೧
ಭದ್ರಪ್ಪ	೧೬೭೧ ರಿಂದ ೧೬೭೩
ಸೋಮಶೇಖರ i	೧೬೭೩ ರಿಂದ ೧೬೭೧
ಚಿನ್ನವಮ್ಮ	೧೬೭೧ ರಿಂದ ೧೬೯೭

CC-O. Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಪಾಶ್ಚಾತ್ಯ ನಾಗರೀಕತೆಯ ಪ್ರಭಾವ ನಮ್ಮ ಜನಜೀವನದ ಮೇಲೆ ವಿಪರೀತವಾಗಿ ನಮ್ಮ ಸ್ವಾಭಾವಿಕ ಗುಣಗಳಾಗಿದ್ದ ಶಾಂತಿ, ಸಹನೆ, ತೃಪ್ತಿ, ಧರ್ಮ, ಶ್ರದ್ಧೆ, ಸತ್ಯನಿಷ್ಠೆ - ಇವೆಲ್ಲಾ ಕಾಣದಾಗುತ್ತಿರುವ ಇಂದು ಸನಾತನ ಧರ್ಮಜಾಗೃತಿಯನ್ನುಂಟುಮಾಡಿದ ಮಹಾಪುರುಷರ ಜೀವನ ಚರಿತ್ರೆ, ಧಾರ್ಮಿಕ, ಆಧ್ಯಾತ್ಮಿಕ ಕೃತಿಗಳನ್ನು ಪ್ರಕಟಿಸಿ, ತನ್ಮೂಲಕ ಭಾರತೀಯ ಸಂಸ್ಕೃತಿಯ ಪರಿಚಯವನ್ನು ಇಂದಿನ ಜನಾಂಗಕ್ಕೆ ಮಾಡಿಕೊಡುವುದೇ ನಮ್ಮ ಉದ್ದೇಶ.

ಈ ದಿಸೆಯಲ್ಲಿ ನಮ್ಮ ಪ್ರಕಟಣೆಗಳು :

ಹು. ಲಕ್ಷ್ಮೀನರಸಿಂಹಶಾಸ್ತ್ರಿಯವರ

1. ಮಹಾತಪಸ್ವಿ ಶ್ರೀ ಚಂದ್ರಶೇಖರಭಾರತೀ
ಜೀವನ ಚರಿತ್ರೆ — ರೂ. 3—75

2. ಸಂಭಾಷಣ ತರಂಗಿಣಿ
ಶ್ರೀ ಚಂದ್ರಶೇಖರಭಾರತೀ ಸ್ವಾಮಿಗಳವರ ಉಪದೇಶಗಳು — ರೂ. 1—00

3. ಉಪದೇಶ ಮಂಜರಿ
ಶ್ರೀ ಚಂದ್ರಶೇಖರಭಾರತೀ ಸ್ವಾಮಿಗಳವರ ಉಪದೇಶಗಳು — ರೂ. 1—50

4. ಶ್ರೀ ಸಚ್ಚಿದಾನಂದಭಾರತೀ
ಜೀವನ ಚಿತ್ರ — ರೂ. 1—00

5. ಕಂಚಿಕಾಮಾಕ್ಷಿ
ಪ್ರಬಂಧ — ರೂ. 1—00

6. ರಾಜಯೋಗಿ ಶ್ರೀ ನರಸಿಂಹಭಾರತೀ
ಜೀವನ ಚರಿತ್ರೆ — ರೂ. 6—00

ಗಣಪತಿರಾವ್ ಮೊಜಾಸಿಯವರ

7. ಸ್ವಾಮಿ ಶ್ರೀ ಭಾರತೀ ಕೃಷ್ಣತೀರ್ಥ
ಜೀವನ ಚಿತ್ರ — ರೂ. 0—50

ಕಾಶ್ಯಪರವರ

8. ನರಸಿಂಹ
ಸಂತೋಷನಾತ್ಮಕ ಲೇಖನ — ರೂ. 0—60

ತ. ರಾ. ಸುಬ್ಬರಾವ್‌ರವರ

9. ಕ್ರಿಯೋಶಕ್ತಿ ವಿದ್ಯಾರಣ್ಯ
ವಿಮರ್ಶೆ — ರೂ. 2—00

ವಿವರಗಳಿಗೆ : ವಿದ್ಯಾಶಂಕರ ಪ್ರಕಾಶನ
30, ದೇವೀರಮ್ಮಣ್ಣಿ ಅಗ್ರಹಾರ
ಮೈಸೂರು-570 004

Sri Vidyabharathi Book Centre, Sringeri